ಅಪರಂಜಿ

ಆಗಸ್ಟ್ 2000

ತಿಳಿನಗೆಯ ಕಾರಂಜಿ



ಪ್ರಕಾಶ್

ಆರಾರ್ಕೆ

ಕುಮುದ ಪುರುಷೋತ್ತಮ್

ವಿಜಯ ಸಚ್ಚಿದಾನಂದ

ಬಿ.ಎಸ್. ಪ್ರಭಾಕರ್

ಹೆಚ್.ಎಸ್. ಕೃಷ್ಣಸ್ವಾಮಿ

ನಾಗೂಶ್ರೀ ಸೂರಿ

ಟಿ. ಸುನೀತ

ಎಂ.ಎಸ್.ಎಸ್. ಮೂರ್ತಿ

ಕೃಷ್ಣ ಸುಬ್ಬರಾವ್

ಬಿ.ಆರ್. ನಾಗೇಶ್

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500

Ph: 3345259
email. aparanji@hotmail com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 17 ಆಗಸ್ಟ್ - 2000 ಸಂಚಿಕೆ - 11

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 17 ಆಗಸ್ಟ್ - 2000 ಸಂಚಿಕೆ - 11

ಯುಂಜನ್ನೇವಂ ಸದಾತ್ಮಾನಂ ಯೋಗಿ ನಿಯತಮಾನಸಃ

ಶಾಂತಿಃ ನಿರ್ವಾಣಪರಮಾಂ ಮತ್ಸಂಸ್ಥಾಮಧಿಗಚ್ಛತಿ॥

ಧ್ಯಾನ ಯೋಗ - ಭಗವದ್ಗೀತೆ

ಯೋಗಿಯಾದವನು ತನ್ನ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಳ್ಳುತ್ತಾನೆ. ಹೀಗೆ ದೇಹ, ಮನಸ್ಸು ಮತ್ತು ಕಾರ್ಯಗಳ ನಿಯಂತ್ರಣದಿಂದ ಅವನು ಭಗವಂತನ ಸಾಕ್ಷಾತ್ಕಾರವನ್ನು ಸಿದ್ಧಿಸಿಕೊಳ್ಳುತ್ತಾನೆ. ಯಾವ ಕೆಲಸ ಮಾಡಬೇಕಾದರೂ ಮನಸ್ಸಿನ ನಿಯಂತ್ರಣ ಮುಖ್ಯ. ತನ್ಮಯತೆ ಮುಖ್ಯ. ಹೀಗೆ ಮಾಡಿದ ಕೆಲಸದಿಂದ ಗುರಿ ಸಾಧನೆ ಸಾಧ್ಯವಾದೀತು. ಇದು ಬರೀ ಯೋಗಿಗಳಿಗೆ ಅನ್ವಯಿಸುವ ಮಾತಲ್ಲ. ಪ್ರಾಪಂಚಿಕ ವ್ಯವಹಾರಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವ ಮನುಷ್ಯ ತಾನು ಮಾಡುವ ಕೆಲಸಗಳಲ್ಲಿ ಯುಕ್ತಾಯುಕ್ತತೆ, ಸತ್ಯಾಸತ್ಯತೆ ಮುಂತಾದವುಗಳನ್ನು ಅರಿತು ಮುಂದುವರಿಯಬೇಕಾದರೆ ದೇಹ ಮನಸ್ಸು ಮತ್ತು ಕಾರ್ಯಗಳ ನಿಯಂತ್ರಣ ಬಹು ಮುಖ್ಯ. ಇದರಿಂದಾಗಿ ಅವನು ಮಾಡುವ ಕೆಲಸಗಳಲ್ಲಿ ಸಾಫಲ್ಯತೆ ಕಾಣುತ್ತದೆ. ವಿವೇಚನಾ ಶಕ್ತಿ ಬೆಳೆಯುತ್ತದೆ, ಗುರಿ ಸಾಧನೆ ಮಾಡುವ ವಿಚಾರದಲ್ಲಿ ತನ್ಮಯತೆ ಮೂಡುತ್ತದೆ ಹಾಗೂ ತಾನು ಹಮ್ಮಿಕೊಂಡ ಕೆಲಸದಲ್ಲಿಯೇ ಅವನು ಭಗವಂತನ ಸಾಕ್ಷಾತ್ಕಾರವನ್ನು ಹೊಂದುತ್ತಾನೆ.



○ ಪ್ರಕಾಶ್

''ನಕಲಿ ದಾಖಲೆ ನೀಡಿ ಬ್ಯಾಂಕ್‌ಗೆ ವಂಚನೆ''

''ನಗರದಲ್ಲಿ ಅಪರಾಧಗಳ ಸಂಖ್ಯೆ ಗಣನೀಯ ಇಳಿಮುಖ''

- ಶ್ರೀ ಕೃಷ್ಣ

ದಿನಪತ್ರಿಕೆಯಲ್ಲಿ ಒಂದರ ಕೆಳಗೆ ಒಂದು ಸುದ್ದಿ!!

★★★

ಸೊಳ್ಳೆ ನಿರ್ಮೂಲನಕ್ಕೆ 5 ಕೋಟಿ ಯೋಜನೆ

- ಪತ್ರಿಕೆ

5 ಕೋಟಿ ಸೊಳ್ಳೆಗಳೂ ನಕ್ಕವಂತೆ!!

★★★

ಕಲ್ಲಿದ್ದಲು ಹಗರಣ; ಜಯಲಲಿತ ವಿರುದ್ಧ ಆರೋಪ ಪಟ್ಟಿ

- ಸುದ್ದಿ

ಸುದ್ದಿ ಕರಾಳವಾಗಿದೆ!

★★★

ಕಲ್ಬುರ್ಗಿ; ಮೆರವಣಿಗೆಗೆ ತಂದಿದ್ದ ಕತ್ತೆಗಳ ವಶ

- ಪತ್ರಿಕೆ

ಕತ್ತೆಗಳ ಸಂಘ ತೀವ್ರವಾಗಿ ಪ್ರತಿಭಟಿಸಿತಂತೆ!!

★★★

ಗವಾಸ್ಕರ್ ಲಾಕರಿನಲ್ಲಿ ಹಣ ಪತ್ತೆ

- ಸುದ್ದಿ

ಈ ಗೂಗ್ಲಿಯನ್ನು ಅವರು ಹೇಗೆ ಎದುರಿಸುತ್ತಾರೋ??

★★★

ವರದಕ್ಷಿಣೆ; ಚೇತನ್ ಚೌಹಾನ್‌ಗೆ ಕೋರ್ಟ್ ಸಮನ್ಸ್

- ಪತ್ರಿಕೆ

ಇದನ್ನ ಮ್ಯಾಚ್ ಫಿಕ್ಸಿಂಗ್ - ಫಿಕ್ಸಿಂಗ್ ಅನ್ನಬಹುದು!!

★★★

ವಾಸ್ಕೋ - ಬೆಂಗಳೂರು ನೇರ ರೈಲಿಗೆ ಒತ್ತಾಯ

- ಪತ್ರಿಕೆ

ಆಗ "ಗೋ", "ವಾ" ಎರಡೂ ಬೇಗ ಆಗುತ್ತೆ!!

★★★

ಶಾಲಾ ವೇಳೆ - ವಿವಾದ, ಗೊಂದಲ

- ಶೀರ್ಷಿಕೆ

ಸರ್ಕಾರ - ಶಾಲೆಗಳ ಜಗಳದಲ್ಲಿ ಕೂಸು ಬಡವಾಯಿತು!!

★★★

ಶಾಖಾಧಿಕಾರಿಗಳಿಗೆ ಬಡ್ತಿ

- ಸುದ್ದಿ

ಅವರಿಗೆ ಲವಣ - ಅಲೋಯೆನ್ಸ್ ಕೊಡುತ್ತಾರಂತೆ!!

★★★

ಸ್ಫೂರ್ತಿ

– ಆರಾಧ್ಯ

ಇದುವರೆವಿಗೂ ನನಗೆ ಸರಿಯಾಗಿ ಗೊತ್ತಿರಲಿಲ್ಲ ಹೇಗೆ ಸ್ಫೂರ್ತಿ ಬರುತ್ತದೆಂದು. ಈಚೀಚಿಗೆ ಅದು ಬರುತ್ತಾ ಇದೆ ಎನ್ನಿಸುತ್ತಿದೆ. ಕೆಲವರು ಹೇಳುವರು "It is like a bolt from the blue" ಎಂದು. ಆರ್ಕಿಮಿಡೀಸನ ತರಹ Bath tub ನಲ್ಲಿದ್ದಾಗ ಯುರೇಕಾ! ಯುರೇಕಾ! ಎಂದು ಕಿರುಚಿಕೊಂಡು ಹಾಗೇ ಈಚೆಗೆ ಬರುವ ರೀತಿಯೋ ಅಥವಾ ಸಣ್ಣದಾದ ಗುಡುಗಿನಿಂದ ಆರಂಭವಾಗಿ ಕೊನೆಗೆ ಸಿಡಿಲು ಹೊಡೆಯುವ ತರಹವ್ರೋ ಇನ್ನೂ ಅರ್ಥವಾಗಿಲ್ಲ.

ಮೊನ್ನೆ ಕಾರು ಒರೆಸುತ್ತಾ ಇದ್ದೆ. ಏನೋ ಸ್ಫೂರ್ತಿ ಬಂದಿತು. ಒರೆಸುವ ಬಟ್ಟೆಯನ್ನು ಕಾರಿನ ಮೇಲೆ ಹಾಗೇ ಬಿಟ್ಟು ಮನೆಯ ಒಳಗೆ ಬಂದು ಪೇಪರ್ ಪೆನ್ನಿಗಾಗಿ ತಡಕಾಡಲು ಹತ್ತಿದೆ. ನನ್ನ house keeping ಸರಿಯಾಗಿಲ್ಲದಿರುವುದರಿಂದ ಆ itemಗಳು ಬೇಗನೆ ಸಿಗಲಿಲ್ಲ. ನಮ್ಮ ಮನೆಯವರಿಗೆಲ್ಲಾ ಗಾಬರಿ ಆಗಲಿಕ್ಕೆ ಶುರುವಾಯಿತು. ಯಾವುದೋ ಕೆಲಸ ಅರ್ಧಕ್ಕೆ ಬಿಟ್ಟು ಇನ್ನೇನನ್ನೋ ಹಿಡಿದರೆ ಗಾಬರಿ ಆಗುವುದು ಸಹಜವೇ. ಏಕೆಂದರೆ ನನ್ನ ತಲೆ ಒಳಗೆ computer ಇಲ್ಲ ಅದರಲ್ಲಿ ROM (Read Only Memory) ಮತ್ತು RAM (Random Access Memory) ಇರುವುದು. ಕಂಪ್ಯೂಟರ್ ಕೈಗೆಟುಕುವ ಹಾಗಿದ್ದರೆ (ಬೆಲೆಯಲ್ಲೂ ಸಹ) ಆದಕ್ಕೆ ತಕ್ಷಣ ವರ್ಗಾಯಿಸಬಹುದು ಹಾಗೂ save ಮಾಡಬಹುದು (ಅಷ್ಟರಲ್ಲಿ current ಹೋಗಬಾರ್ದು) A stitch in time saves nine ಎಂದ ಹಾಗೆ save ಮಾಡಿ "ಬದುಕಿದೆಯಾ!" ಎನ್ನಬಹುದು. ಸ್ಫೂರ್ತಿ ಎಂಬುದು impulse ಕೆಲವರಿಗೆ ಹುಣ್ಣಿಮೆ ಚಂದ್ರನನ್ನು ನೋಡಿದರೆ ಬರಬಹುದು. ಬಂದಾಗ ಅವರು ಕವಿಗಳಾಗಿದ್ದರೆ ಕೆಲವು ಶಬ್ದಗಳನ್ನೋ ಸಾಲುಗಳನ್ನೋ sudden ಆಗಿ ಹೊಸೆಯಬಹುದು. ಅದು ಕವಿತೆಯಾಗಬಹುದು ಅಥವಾ ಕ.ಬು.ಗೆ ಆಹಾರ ಆಗಬಹುದು. ಕೆಲವರಿಗೆ ಸಮುದ್ರ ತೀರಕ್ಕೆ ಹೋದರೆ ಸ್ಫೂರ್ತಿ ಬರಬಹುದು. ಸಮುದ್ರದ ವೈಶಾಲ್ಯದೆದುರು ತನ್ನ ಕುಬ್ಜತನವನ್ನು ನೆನೆದು ಕವಿತೆ ಕಟ್ಟಬಹುದು. ಸ್ಫೂರ್ತಿ ಬಂದಾಗಲೆಲ್ಲ ಕವಿತೆ ಬರೆಯಬೇಕೆಂದಾಗಲೀ, ಹಾಡಬೇಕೆಂದಾಗಲೀ ನಿಯಮವಿಲ್ಲ. ಪೆನ್ನು ತೆಗೆದುಕೊಂಡು ಸುಮ್ಮನೆ ಪರ ಪರ ಎಂದು ಗೀಚಬಹುದು, ಕಾಗದದ ಮೇಲೆ, ಗೋಡೆಯ ಮೇಲೆ ಬರೆದರೆ ಪೈಂಟ್ ಮಾಡಿಸಲು ಖರ್ಚಿನ

ಬಾಬತ್ತೇ ಸರಿ. ಸಂಗೀತ ಕಛೇರಿಯಲ್ಲಿ ಪ್ರೇಕ್ಷಕ (ಶ್ರೋತೃ)ನಿಗೆ ಸ್ಫೂರ್ತಿ ಬಂದರೆ ಪಕ್ಕದಲ್ಲಿದ್ದವನ ತೊಡೆಯ ಮೇಲೋ ಅಥವಾ ತಾಮ್ರದ ಚೊಂಬಿನಂತಿರಬಹುದಾದ ಬಕ್ಕತಲೆಯ ಮೇಲೋ 'ಘಟಂ' ಬಾರಿಸಲೂಬಹುದು. ಅದು 'ಜುಗಲಬಂದಿ' ಆಗದೆ ಹೋದರೆ ಸರಿ.

ಬಹಳ ಜನಕ್ಕೆ ಬಚ್ಚಲ ಮನೆಯಲ್ಲಿ ಸ್ಫೂರ್ತಿ ತುಂಬಾ ಜಾಸ್ತಿ ಬರುವುದೆಂದು ಬಹಳಷ್ಟು ಜನ ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಬಾಗಿಲು ಸಂದಿಯಿಂದ ಗವಾಕ್ಷಿಯಿಂದ, Ventilator ನಿಂದ ಸಂಗೀತದ ಲಹರಿಯನ್ನು ಕೇಳಬಹುದು ಎನ್ನುತ್ತಾರೆ, ಇತ್ತೀಚಿನ ಒಬ್ಬ ಮನಶಾಸ್ತ್ರಜ್ಞರು. ಇದಕ್ಕೆ ಕಾರಣ ಅಲ್ಲಿಯ ಒಂಟಿತನವೋ, ನೀರಿನ ಹಬೆಯ ಶಾಖವೋ ಅಥವಾ ವಿವಸ್ತ್ರಾವಸ್ಥೆಯ ಪರಮ ಸುಖವೋ ತಿಳಿಯದು. ಹಬೆಯಿಂದ ಗಂಟಲು ಹಸಿಯಾಗಿ ಗಾಯಕರಾಗುತ್ತಾರೆಂದು ತಿಳಿದು ಬಂದಿದೆ. ಆಗ ಎಲ್ಲಾ ರೀತಿಯ ಸಂಗೀತ ಪ್ರಕಾರಗಳು ಬಚ್ಚಲ ಮನೆಯಲ್ಲೇ ಉದ್ಭವಿಸುವ ಭಯಂಕರ ಅಪಾಯವಿದೆ.

ಇಬ್ಬರು ಜಗಳವಾಡುತ್ತಿರುವಾಗ ಮಧ್ಯೆ ಬಿಡಿಸಲು ಸ್ಫೂರ್ತಿ ಬಂದವರು ಕೊನೆಗೆ ಕೈಕಾಲು ಮುರಿದುಕೊಂಡು ಆಸ್ಪತ್ರೆ ಸೇರಿರುವ ಉದಾಹರಣೆಗಳೆಷ್ಟೋ ಇವೆ.

ಮಧುಪಾನ ಮಾಡಿದ ಮೇಲೆ ಬರುವ ಸ್ಫೂರ್ತಿ ಇನ್ನೊಂದು ರೀತಿಯದು. ತನ್ನ ಹಿಂದಿನ ಐದಾರು ತಲೆಮಾರುಗಳ ಘಟನೆಗಳೆಲ್ಲಾ ಕಣ್ಮುಂದೆ ಹಾಯ್ದು ನಾಲಿಗೆಯಲ್ಲಿ ಹೊರಳಿ ಆಗದಿದ್ದವರನ್ನೆಲ್ಲಾ ಜಾಲಾಡಿ ಸಾಧ್ಯವಾದರೆ ತೂರಾಡುತ್ತಲೇ ಕೈ ಕೈ ಮಿಲಾಯಿಸಿ ಸ್ಫೂರ್ತಿ ''ಪೂರ್ತಿ''ಯಾಗಿ down ಆಗುವವರೆವಿಗೂ ಅಂಗಾತ ಮಲಗುವವರಿಗೇನೂ ಕಡಿಮೆಯಿಲ್ಲ. ಕೋರ್ಟಿನ ಕಟಕಟೆಯಲ್ಲಿ ನಿಂತು ಹೇಳುವ ಹಾಗೆ ''ನಾನು ಈಗ ಬರೇ ಸತ್ಯವನ್ನೇ ಹೇಳುತ್ತಿದ್ದೇನೆ, ಕುಡಿದು ಏನೇನೋ ಮಾತನಾಡುತ್ತಾ ಇಲ್ಲ'' ಎಂದು ಪದೇ ಪದೇ ಗ್ರಾಮಾಫೋನಿನ ಒಡೆದ ರೆಕಾರ್ಡಿನಂತೆ ಹೇಳುವ ಸ್ಫೂರ್ತಿ ಕಂಠಪೂರ್ತಿಯಾದಾಗ ಬರುವುದು ಸಾಮಾನ್ಯ.

ಹೀಗೇ ಸ್ಫೂರ್ತಿ ಬಂದಿತೆಂದು ಬರೆಯುತ್ತಾ ಇದ್ದರೆ ಓದುಗರಿಗೆ ''ಇದು ಯಾರು ಬರೆದ ಕತೆಯೋ...'' ಎಂಬ ಸಿನಿಮಾ ಹಾಡು ಹಾಡಲು ಸ್ಫೂರ್ತಿ ಬರಬಹುದು. ಆದ್ದರಿಂದ ಈ ಸ್ಫೂರ್ತಿಯ ಒಣ ಹರಟೆಗೆ ಇಲ್ಲಿಗೇ ಪೂರ್ತಿ ಬ್ರೇಕ್ ಹಾಕೋಣ.

★★★

ಕನ್ನಡಾಂಬೆಯ ಸೇವೆ!

– ಕುಮುದಾ ಪುರುಷೋತ್ತಮ್

ಕೆಲವರಿಗೆ ಹಾಗೇನೇ ತಿಂದ್ಕೊಂಡು ಉಂಡ್ಕೊಂಡು ತಮ್ಮ ಪಾಡಿಗೆ ತೆಪ್ಪಗಿರೋಕ್ಕಾಗ್ದು. ಏನಾದರೂ ಕಾರುಬಾರು ಮಾಡ್ತಾನೇ ಇರ್ಬೇಕು. ಪಾಪತ್ತೆಯ ಸ್ವಭಾವವೂ ಅಂತಹುದೇ. ಯಾವುದಾದರೂ ಯೋಚನೆ ತಲೆ ಹೊಕ್ಕರೆ ಕಿವಿಯಲ್ಲಿ ಹುಳು ಹೊಕ್ಕಂತೆ ಚಡಪಡಿಕೆ. ಅದು ಕಾರ್ಯಗತಗೊಂಡಾಗ್ಲೇ ನೆಮ್ಮದಿಯ ನಿಟ್ಟುಸಿರು.

ಈಚೆಗೆ ಕನ್ನಡಮ್ಮನ ಸೇವೆ ಮಾಡಬೇಕು ಅನ್ನೋ ಗುಂಗು ಆರಂಭವಾಯ್ತು. ಭಾಷಾ ಸೇವೆ ಅಂದ್ರೆ ದೇವಸ್ಥಾನಕ್ಕೆ ಹೋಗಿ ಮಾಡುವ ಪ್ರದಕ್ಷಿಣೆ, ನಮಸ್ಕಾರ, ಉರುಳು ಸೇವಗಳಂತಲ್ಲ ಎನ್ನುವುದು ಅವರಿಗೂ ಗೊತ್ತು, ಭಾಷೆಯ ಪ್ರಯೋಗ ವ್ಯಾಪಕವಾಗ್ಬೇಕು, ಜನಜೀವನದಲ್ಲಿ ಅದರ ಹೆಚ್ಚಿನ ಬಳಕೆಯಾಗ್ಬೇಕು, ಅತ್ಯುತ್ತಮ ಸಾಹಿತ್ಯ ರಚನೆಯಾಗ್ಬೇಕು ಎಲ್ಲಾ ಸರಿ. ಆದರೆ ಅದನ್ನು ಕಾರ್ಯಗತಗೊಳಿಸುವ ಬಗೆ? ಒಮ್ಮೊಮ್ಮೆ ತಾನೂ ಚಳುವಳಿ ನಡೆಸಿ ಘೋಷಣೆ ಕೂಗುವುದು, ಕನ್ನಡದಲ್ಲಿಲ್ಲದ ಬೋರ್ಡುಗಳಿಗೆ ಮಸಿ ಬಳಿಯುವುದು ಇತ್ಯಾದಿ ಮಾಡಿ ಕ್ರಿಯಾತ್ಮಕವಾಗುವ ಎನಿಸಿದರೂ ಮತ್ತೊಮ್ಮೆ ಸದ್ದಿಲ್ಲದ ಶಾಂತಿಯುತ ಕ್ರಾಂತಿಯೇ ಮೇಲು ಎನಿಸುತ್ತಿತ್ತು. ಇದೇ ಗೋಜಲಿನಲ್ಲಿದ್ದಾಗಲೇ ಸಮಾರಂಭ ಒಂದರಲ್ಲಿ ಮಣಿ ಮೇಖಲೈ ಭೇಟಿಯಾಗಿದ್ದು. ಆಕೆ ಕಳೆದ ಇಪ್ಪತ್ತು ವರ್ಷಗಳಿಂದ ಕರ್ನಾಟಕದಲ್ಲಿಯೇ ನೆಲೆಸಿ ಭಯಂಕರವಾದ ಕನ್ನಡ ಮಾತನಾಡುತ್ತಿದ್ದಳು. ''ನೋಡಿ, ನನ್ನ ಮಹನ್ ಸೆಲ್ವಂ ಎಲ್ಲಾ ಸಬ್‌ಜೆಕ್ಟು ಪಾಸು. ಕನ್ನಡತ್ತಿಲೆ ಮಾತ್ರ ಫೈಲು. ಯೇನು ಮಾಟುವತು ಅಂತ ಚಿಂತೆ ಮಾಡಿ ಮಾಡಿ ಮುಂಡೆ ವಡೆದು ಹೋಕ್ತಾ ಇದೆ'' ಹೀಗೆಂದು ಗೋಳು ತೋಡಿಕೊಂಡಾಗ ಪಾಪತ್ತೆಯ ತಲೆಯಲ್ಲಿ ಮಿಂಚಿನ ಸಂಚಾರವಾಯ್ತು. ಸೆಲ್ವನಿಗೆ ಖುದ್ದಾಗಿ ಕನ್ನಡ ಕಲಿಸುವ ಪಣ ತೊಟ್ಟರು. ಮಣಿ ಮೇಖಲೈ ಇದೇರೀತಿ ಕನ್ನಡದಲ್ಲಿ ಫೇಲ್ ಆಗುವ ತನ್ನ ಕಾಲೋನಿಯ ಮತ್ತೂ ಮೂರು ನಾಲ್ಕು ಮಕ್ಕಳನ್ನು ಕರೆತರುವುದಾಗಿ ಭರವಸೆ ನೀಡಿದಳು.

ಮುಹೂರ್ತ, ಘಳಿಗೆ ನೋಡಿ ಸರಸ್ವತಿ ಪೂಜೆ ಮಾಡಿ ಕೋಸಂಬರಿ, ರಸಾಯನ ಪ್ರಸಾದವನ್ನು ಬಂದ ಮಕ್ಕಳಿಗೂ, ತಾಯಂದಿರಿಗೂ ಹಂಚಿಕೆಯಾಗಿ ತರಗತಿಗಳು ಆರಂಭಗೊಂಡವು. ''ಫೀಸೆಷ್ಟು ಮೇಡಂ?'' ತಾಯಿಯೊಬ್ಬಳು

ಕೇಳಿದಳು. ಫೀಸು? ಪಾಪ, ಪಾಪತ್ತೆ ಆ ಬಗ್ಗೆ ಯೋಚಿಸಿಯೇ ಇರಲಿಲ್ಲ. ಹೊರಟಿರುವುದು ಕನ್ನಡ ತಾಯಿಯ ನಿಸ್ವಾರ್ಥ ಸೇವೆ ಮಾಡಲು. ಅದಕ್ಕೆ ಶುಲ್ಕವೇ ಛೆ.. ಛೆ.. ಇದು ತಾಯ್ನುಡಿಗೆ ಮಾಡುವ ಅಪಚಾರ. ಇದು ಉಚಿತ ತರಗತಿ ಎಂದು ಸಾರಿಬಿಟ್ಟರು.

ಸುದ್ದಿ ಬೇಸಿಗೆಯ ಕಾಡ್ಗಿಚ್ಚಿನಂತೆ ಹರಡಿತು. ಮೂವತ್ತೈದು ಮಕ್ಕಳು ಪಾಲಕರೊಡನೆ ಒಂದೇ ಬಾರಿ ಮುತ್ತಿಗೆ ಹಾಕಿದರು. ಮನೆಯ ಮುಂದೆ ಜನ ಮರುಳೋ ಜಾತ್ರೆ ಮರುಳೋ ಆಗಿ ಏನೋ ಅನಾಹುತವಾಗಿರಲು ಸಾಕು ಎಂದುಕೊಂಡ ನೆರೆಯವರು ಆ್ಯಂಬುಲೆನ್ಸಿಗೆ ಹೊರೆಯವರು ಹೊಯ್ಸಳಕ್ಕೆ ಫೋನಾಯಿಸಿದರು. ವಾಸನೆ ಹಿಡಿದು ಬಂದ ಪತ್ರಕರ್ತರೆಲ್ಲಾ ಹೊರಗೆ ನಿಂತ ಮಾವಯ್ಯನನ್ನು ಎದುರಿಸಿದರು. ಇಷ್ಟೆಲ್ಲ ಪ್ರಚಾರದಿಂದ ಮುಜುಗರಗೊಂಡ ಮಾವಯ್ಯ ವಸ್ತುಸ್ಥಿತಿ ತಿಳಿಹೇಳಿ ಎಲ್ಲರನ್ನೂ ಸಾಗಹಾಕುವುದರಲ್ಲಿ ಸುಸ್ತಾದರು.

ಪಾಪತ್ತೆ ಮಾತ್ರ ಸ್ವಲ್ಪವೂ ವಿಚಲಿತರಾಗದೆ ಕುರ್ಚಿ, ಮೇಜು, ಸ್ಟೂಲು, ಮಣೆ, ಚಾಪೆ, ಕಿಟಕಿ, ಬೀರು, ಟಿ.ವಿ. ಮುಂತಾದುವುಗಳ ಮೇಲೆ ಮಕ್ಕಳನ್ನು ಕುಳ್ಳಿರಿಸಿ ಪಾಠ ಆರಂಭಿಸಿದರು.

''ನೋಡಿ ಮಕ್ಕಾ, ಯಾವುದೇ ಭಾಷೆ ಕಲಿಯಲು ಆ ಭಾಷೆಯಲ್ಲೇ (ನಿಮಗೆ ಬಂದಂತೆ) ಮಾತನಾಡಲು ಪ್ರಯತ್ನ ಪಟ್ಟರೆ ಕಲಿಯುವುದು ತುಂಬಾ ಸುಲಭ. ನನ್ನ ಬಳಿ ಇನ್ನು ಮೇಲೆ ನೀವೆಲ್ಲಾ ಕನ್ನಡದಲ್ಲಿ ಸಂಭಾಷಿಸಬೇಕು.''

''ಯಸ್ ಆಂಟಿ.''

''ಇಂಗ್ಲೀಷಿನಲ್ಲಿ ಆಡಬಾರದು. ಕನ್ನಡದಲ್ಲಿ ಆಡಬೇಕು.''

''ವಿ ವಿಲ್ ಸ್ಪೀಕ್ ಇನ್ ಕನ್ನಡ''

''ಎಲ್ಲಿ ಮಾತನಾಡಿ ನೋಡೋಣ. ನಾವು ಕನ್ನಡದಲ್ಲೇ ಮಾತನಾಡುತ್ತೇವೆ ಎಂದು ಹೇಳಿ'' ಪಾಪತ್ತೆ ಪಟ್ಟು ಬಿಡದೆ ಹೇಳಿಕೊಟ್ಟರು. ಮಕ್ಕಳಿಗೆಂತಹುದೋ ನಾಚಿಕೆ. ಪೂರ್ವಕಾಲದ ಪುಟ್ಟಕ್ಕ ಗಂಡನ ಹೆಸರನ್ನು ಹೇಳಲು ನಾಚುವಂತೆ ನಾಚಿಕೊಂಡವು! ಅವುಗಳ ಬಾಯಿಂದ ಕನ್ನಡ ಪದ ಮಾತ್ರ ಉದುರಲಿಲ್ಲ.

ಒಂದು ದಿನ ಹೀಗೆ ಪಾಠ ಸಾಗಿತ್ತು. ಪಾಪತ್ತೆ ಗಟ್ಟಿಯಾಗಿ ಓದುವುದು, ಅದನ್ನು ಮಕ್ಕಳನುಸರಿಸಿ ಹೇಳುವುದು ಸಾಗಿತ್ತು. ಉದ್ದೇಶ ಶುದ್ಧ ಉಚ್ಚಾರ ಕಲಿಸುವುದಾಗಿತ್ತು.

ಇದು ಒಂದು ಹಳ್ಳಿ	ಇದು ಒಂದು ಹಲ್ಲಿ
ಒಂದು ಹಳ್ಳಿ	ಒಂದು ಹಲ್ಲಿ
'ಳ್ಳಿ'	'ಲ್ಲಿ'
ಅಜ್ಜಿ ಕಥೆ ಹೇಳುತ್ತಾಳೆ	ಅಜ್ಜಿ ಕಥೆ ಹೇಲುತ್ತಾಲೆ
ಹೇಳುತ್ತಾಳೆ	ಹೇಲುತ್ತಾಲೆ
ಹೇ...ಳು	ಹೇ...ಲು
ಹಣೆ ಬರಹ	ಹನೆ ಬರಹ

ಪಾಠ ಹೇಳುವುದು ನಿಜಕ್ಕೂ ಹಣೆ ಬರಹವೇ ಆಗಿತ್ತು. ಉಚ್ಚಾರದ ಮನೆ ಹಾಳಾಯ್ತು ಬರವಣಿಗೆ ಕಲಿಸುವ ಎಂದುಕೊಂಡು ಉಕ್ತಲೇಖನ ಹೇಳಲು ಆರಂಭಿಸಿದರು. ಪಾಪ, ಮಕ್ಕಳದು ಸರಳ ನೇರ ಬರವಣಿಗೆ. ಒತ್ತು, ಗುಡಿಸು, ಕೊಂಬು, ದೀರ್ಘ, ಇಳೀ, ವಟ್ರಸುಳಿ ಯಾವುದರ ಬಂಧವನೂ ಇಲ್ಲದ ಮುಕ್ತ ಕನ್ನಡ. ತಿದ್ದಲು ಪ್ರಯತ್ನಿಸಿದಾಗ ಅಸ್ಸಾಮಿನ ಮೋಹಿತ್ ಬರುವಾ ಪ್ರತಿಭಟಿಸಿದ. ''ಕನ್ನಡ ಈಸ್ ವೆರಿ ಡಿಫಿಕಲ್ಟ್ ಆಂಟೀ. ವಿ ಕೆನ್ನಾಟ್ ಲರ್ನ್ ಎನಿ ಮೋರ್ ಆಫ್ ದಿಸ್ ಇಫ್ ಯೂ ಮೇಕ್ ಎ ಫ಼ಸ್''

ಚಿಕ್ಕಂದಿನಲ್ಲಿ ಶಾಲೆಯ ಕನ್ನಡ ಪಂಡಿತರು ರಾಗವಾಗಿ ಹೇಳಿಕೊಡುತ್ತಿದ್ದ ಕನ್ನಡ ಪದ್ಯ ಕಿವಿಯಲ್ಲಿ ಮೂಡಿ ಅಣಕಿಸಿದಂತಾಯ್ತು.

ಸುಲಿದ ಬಾಳೆಯ ಹಣ್ಣಿನಂದದಿ। ಕಳಿದ ಚಿಗುರಿನ ಕಬ್ಬಿನಂದದಿ

ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ।

ಪಾಪತ್ತೆಯ ಕನ್ನಡ ಪಾಠ ಉತ್ಸಾಹದಿಂದಲೇ ಮುಂದುವರೆದರೂ ಶಿಷ್ಯಕೋಟಿಯ ಆಸಕ್ತಿ ಸ್ವಲ್ಪ ಸ್ವಲ್ಪವೇ ತಣ್ಣಗಾಗುತ್ತಾ ಹೋಯಿತು. ಒಂದು ದಿನ ತರಗತಿಗೆ ಎಂಟು ಮಕ್ಕಳು ಬಂದರೆ ಮತ್ತೊಂದು ದಿನ ಐದೋ ಆರೋ. ಒಮ್ಮೊಮ್ಮೆ ಎರಡು ಮೂರಕ್ಕೂ ಇಳಿಯುತ್ತಿತ್ತು. ಗೈರು ಹಾಜರಿಗೆ ಹತ್ತು ಹಲವು ಕಾರಣಗಳು. ಹೊಟ್ಟೆ ನೋವು, ತಲೆ ನೋವು, ಇತ್ಯಾದಿಯಾಗಿ ತಲೆಯಿಂದ ಉಂಗುಷ್ಠದವರೆಗೂ ವಿವಿಧ ನೋವುಗಳು, ಮನೆಗೆ ನೆಂಟ್ರು ಬಂದ್ರು, ನಮ್ಮಪ್ಪ ಸರ್ಕಸ್ಸಿಗೆ ಕರ್ಕೊಂಡು ಹೋದ್ರು, ಇವತ್ತು ಹಬ್ಬ, ನಮ್ಮನೆ ನಾಯಿ ಮರಿ ಹಾಕ್ತು, ಇಂದು ನಲ್ಲೀಲಿ ನೀರು ಬರ್ಲಿಲ್ಲ ಹೀಗೆ ಒಂದಿಲ್ಲೊಂದು ಕಾರಣಗಳು. ಮರಿ ಸರ್ದಾರ್‌ಜಿ ಮುಚ್ಚು ಮರೆಯಿಲ್ಲದ ಹರ್‌ಕಿಶನ್ ಸಿಂಗ್ ವಾಸ್ತವವನ್ನೇ

ನುಡಿದುಬಿಟ್ಟ. ''ನಮ್ಮಮ್ಮ ಹೇಳ್ತಾರೆ, ಹೇಗಿದ್ರೂ ಫೀಸಿಲ್ಲದ ಬಿಟ್ಟಿ ಕ್ಲಾಸು. ಫೀಸಿದ್ರೆ ಅಯ್ಯೋ ದುಡ್ಡು ವೇಸ್ಟು ಅನ್ನಿಸ್ತಿತ್ತು. ನೀನು ಫ್ರೀಯಾಗಿದ್ದ ದಿನ ಹೋಗು. ಮತ್ತೆಲ್ಲ ದಿನ ಬೇಡ ಅಂದ್ರು.'' ಪಾಪತ್ತೆಗೆ ತಾವು ನಡೆಸುತ್ತಿರುವ ದಾರಿ ಸರಿಯಿಲ್ಲ ಎನಿಸಿತು. ಈ ಪರಿಯ ಸೇವೆಯಿಂದ ಭಾಷೆಯ ಅಪಮೌಲ್ಯವಾಗುತ್ತಿದೆ ಎನಿಸಿ ನಿಲುವನ್ನು ಬದಲಾಯಿಸಿಕೊಂಡರು. ''ಮೊದಲ ಒಂದು ತಿಂಗಳು ಫೀಸಿಲ್ಲ. ಬರುವ ತಿಂಗ್ಳಿನಿಂದ ನೂರೈವತ್ತು ರೂಪಾಯಿ ಫೀಸು.'' ಘೋಷಣೆ ಮಾಡಿದ್ದೇ ವಿದ್ಯಾರ್ಥಿಗಳ ಸಂಖ್ಯೆ ಮೂರಕ್ಕಿಳಿಯಿತು. ಮಣಿ ಮೇಖಲೈನ ಮಗ ಸೆಲ್ವ ಕಾರಣ ತಿಳಿಸಿದ. ''ಆಂಟಿ, ಅವರ ಮನೇಲಿ ಕೇವಲ ಕನ್ನಡಕ್ಕೆ ಅಷ್ಟು ದುಡ್ಡು ತುಂಬಾ ಹೆಚ್ಚು. ಕ್ಲಾಸಿಗೆ ಇನ್ನುಮೇಲೆ ಹೋಗೋದು ಬೇಡ ಅಂದ್ರಂತೆ.''

ಪಾಪತ್ತೆಗೆ ಯಾರೋ ಕಪಾಳಕ್ಕೆ ಹೊಡೆದಂತಾಯ್ತು. ಆದರೆ ಯಾವುದೇ ಗುರಿಯತ್ತ ಸಾಗುವಾಗ ಹಳ್ಳಕೊಳ್ಳಗಳು ಸಾಮಾನ್ಯ. ಹಾಗೆಂದು ಸಾಗದೆ ಇರಲಾದೀತೆ? ತಮಗೆ ತಾವೇ ಸಾಂತ್ವನ ಹೇಳಿಕೊಂಡು ಕನ್ನಡಮ್ಮನ ಸೇವೆ ಮುಂದುವರೆಸಿದರು.

ಹೇಗೋ ಪಾಠ ಮುಂದುವರೆದು ಪರೀಕ್ಷೆಯೂ ಬಂದಾಯ್ತು. ಪಾಪತ್ತೆಗೆ ಇನ್ನಿಲ್ಲದ ಆತಂಕ. ವಿದ್ಯಾರ್ಥಿಗಳ ಮಟ್ಟ ತನಗೆ ತಿಳಿದದ್ದೇ. ತನ್ನ ಇಷ್ಟು ದಿನದ ಶ್ರಮ ಹೊಳೆಯಲ್ಲಿ ಹುಣಸೆ ತೊಳೆಂದತಾಗುವುದೇ? ಆತಂಕದ ಮುದ್ದೆಯಾಗಿ ದೇವಸ್ಥಾನಗಳಲ್ಲಿ ವಿದ್ಯಾರ್ಥಿಗಳ ಪರವಾಗಿ ವಿಶೇಷಪೂಜೆ ಅರ್ಚನೆ ನಡೆಸಿದರು. ಪರೀಕ್ಷೆ ಮುಗಿದು ಫಲಿತಾಂಶ ಬಂತು. ಮೂರು ಜನವೂ ನೆಗೆಯುತ್ತಾ ಪೇಡೆ ಇತ್ತು ಸಿಹಿಸುದ್ದಿ ನೀಡಿದರು. ಎಲ್ಲರೂ ತೇರ್ಗಡೆಯಾಗಿ ಕನ್ನಡದಲ್ಲಿ ಶೇಕಡ ತೊಂಬತ್ತೆರಡು, ತೊಂಬತ್ನಾಲ್ಕು, ತೊಂಬತ್ತೊಂದು ತೆಗೆದಿದ್ದರಂತೆ. ಪಾಪತ್ತೆಯ ಅಂದಾಜಿನ ಪ್ರಕಾರ ಇಪ್ಪತ್ತೊಂಬತ್ತು, ನಲ್ವತ್ತೊಂಬತ್ತು, ಹತ್ತೊಂಬತ್ತು ಬರುವುದಿತ್ತು!

ಬಿಚ್ಚುಮಾತಿನ ಹರ್‌ಕಿಶನ್‌ಸಿಂಗ್ ಫಲಶ್ರುತಿ ಹಾಡಿದ. ''ಆಂಟೀ, ನಮ್ಮ ಮನೆಗಳಲ್ಲಿ ಹೇಳಿದ್ರು, ಹೇಗಿದ್ರೂ ಇಷ್ಟು ಒಳ್ಳೆ ಮಾರ್ಕು ತೆಗೆದಿದ್ದೀರಿ ಇನ್ಮೇಲೆ ಟ್ಯೂಷನ್ ಯಾಕೆ? ನೀವೆ ಓದ್ಕೊಳ್ಳಿ ಅಂದಿದ್ದಾರೆ. ಇನ್ಮೇಲೆ ನಾವು ಟ್ಯೂಷನ್ನಿಗೆ ಬರೋದಿಲ್ಲ.''

ಈಚಿನ ವರದಿಗಳಂತೆ ಮತ್ತ್ಯಾವ ಯೋಚನೆ ಹಮ್ಮಿಕೊಳ್ಳಲಿ ಎಂದು ಪಾಪತ್ತೆ ತಲೆ ತುರಿಸಿಕೊಳ್ಳುತ್ತಿದ್ದಾರಂತೆ! ಮಾವಯ್ಯ, ಪಾಪ.

★★★

ನನ್ನ ಮೈಡ್‌ಸರ್ವೆಂಟ್ಸ್ (Maid Servants) ಮತ್ತು ನಾನು

- ವಿಜಯಾ ಸಚ್ಚಿದಾನಂದ

ಇದೇನಿದು ಇಂಥ ಹಳಸಿದ ವಿಷಯಾಂತ ಇದನ್ನ ಓದದೆ pageನ skip ಮಾಡ್ಬಿಡ್ಬೇಡಿ! ಇವರುಗಳ ವಿಷಯ ಎಷ್ಟು ಓದಿದ್ರೂ, ಎಷ್ಟು ಬರೆದ್ರೂ ಸಾಲದೇ ಸಾಲದು ಅನ್ಸುತ್ತೆ! ಅವರು ಜೀವನದ necessary evils ಅಲ್ವೇ! ನಾರ್ತ್ ಇಂಡಿಯಾದಲ್ಲಿ ಒಂದು ಗಾದೆ ಇದೆ. ಮದ್ವೆ ಅನ್ನೋ ಲಾಡುನ ತಿಂದೋನು ಪಶ್ಚಾತ್ತಾಪ ಪಟ್ಟೇಪಡ್ತಾನೆ ತಿನ್ನದೇ ಇದ್ದೋನೂ ಅಷ್ಟೇ ಪಶ್ಚಾತ್ತಾಪ ಪಡ್ತಾನೇಂತ ಹಾಗೇ ಕೆಲ್ಸದೋರನ್ನ ಇಟ್ಕೊಂಡೋರು ಪಶ್ಚಾತ್ತಾಪ ಪಡ್ತಾರೆ. ಇಟ್ಕೊಳ್ಳದೇ ಇದ್ದೋರು ಸಹ ಪಶ್ಚಾತ್ತಾಪಿಸ್ಕೋಬೇಕು.

ಅದ್ರಲ್ಲಂತೂ ನಮ್ಮನೆ ಕೆಲ್ಸದೋರು - They take the care ಅಂತಾರಲ್ಲಾ ಹಾಗೆ! ಅವುಗಳ ಲಾಜಿಕ್ಕೇ ಲಾಜಿಕ್ಕು. ತಮಗೆ ಮೈ ಹುಷಾರು ತಪ್ಪಿದರೂ ಒಂದು ವಾರ ರಜ ಹೊಡಿತಾರೆ - ಹಾಗೇ ನನಗೆ (ಅಂದ್ರೆ ಅವರ ಯಜಮಾಂತಿಗೆ) ಹುಷಾರು ತಪ್ಪಿದರೂ ತಾವೇ ರಜ ಹೊಡೀತಾರೆ. ಅವರನ್ನೇನಾದ್ರೂ, ಯಾಕೆ ಇಷ್ಟು ದಿನ ಬರ್ಲಿಲ್ಲಾಂತ ಕೇಳೋ ಧೈರ್ಯ ಉಂಟೇ! ಖಂಡಿತಾ ಇಲ್ಲ! ಅಷ್ಟು ದಿನ ಕೆಲ್ಸ ಮಾಡ್ಕೊಂಡು ಸುಸ್ತಾಗಿರುತ್ತಲ್ಲಾ ಸಧ್ಯ! ಬಂದ್ಲಲ್ಲಾ ಅಂತ ಸಂತೋಷದ ಉಸಿರು ಬಿಟ್ಟು ನಗುವಿನಿಂದ ಸ್ವಾಗತಿಸಿ ಊಟ ತಿಂಡಿ ಉಪಚಾರ ಬೇರೆ!

ಹಳೆ ಕೆಲ್ಸದೋರನ್ನೆಲ್ಲಾ ಮೆಲಕು ಹಾಕ್ತಾ ಹೋದ್ರೆ ಮೊದಲು ಜ್ಞಾಪಕಕ್ಕೆ ಬರೋದು ಮಾಲತಿ. pride of place ಅವಳಿಗೆ. ನೋಡೋದಕ್ಕೇನು ಅಂತಹ ಸುಂದ್ರಿ ಅನ್ನಿಸ್ದೇಯಿದ್ರೂ, ಅವಳ ಮೈಕಟ್ಟು ಮಾತ್ರ ಶಿಲಾಬಾಲಿಕೆಯರನ್ನು ಮೀರಿಸುತ್ತಿತ್ತು. ಇತ್ತೀಚೆಗೆ TV ಗಳಲ್ಲಿ Surf Excelನ ಬಿಳುಪೂಂತ ತೋರ್ಸ್ತೋದಿಲ್ವೇ - ಅಂತ ಬಿಳಿ ಸೀರೆನ (ಬರಿ ಬಾರ್ ಸೋಪಿನಿಂದ ಒಗೆದದ್ದು) ಉಟ್ಕೊಂಡು ಕೆಲ್ಸ ಮಾಡ್ತಿದ್ರೆ ನನಗೆ ಹೊಟ್ಟೆ ಉರ್ದು ಹೋಗೋದು!

ಯಾಕಂತೀರಾ! ನನಗೆ ವಂಶಪಾರಂಪರ್ಯವಾಗಿ ಬಂದ ಆಸ್ತಿಯೆಂದರೆ ಸ್ಥೂಲಕಾಯ. ಅದನ್ನು ಕರಗಿಸಿಕೊಳ್ಳೋದಕ್ಕೇಂತ ಮಾಡದ ಉಪಚಾರಗಳಿಲ್ಲ. ಏರೋಬಿಕ್ಸ್, ಹಾರೋಬಿಕ್ಸ್, ಯೋಗ ಅಂತೆಲ್ಲಾ ಕಷ್ಟಪಟ್ರೂ ಒಂದು ಗ್ರಾಂ ಆದ್ರೂ ಕಮ್ಮಿಯಾದೆ ಅಂದ್ಕೊಂಡ್ರ - ಇಲ್ಲ! ಇಷ್ಟರ ಮೇಲೆ ಡಯಟ್ ಅಂತ ಬೇರೆ. ಯಾವ ಹಬ್ಬ ಆಗ್ಲಿ ಹರಿದಿನ ಆಗ್ಲಿ ಎರಡು ಒಣ ರೊಟ್ಟಿ ಹಸಿ ತರಕಾರಿ ತಿಂದು ಅರಹೊಟ್ಟೆಲಿದ್ರೂ ಏನೂ ಪ್ರಯೋಜನವಾಗ್ತಿರಲಿಲ್ಲ.

ಅದಲ್ದೇ ಮನೆಗೆ ಬಂದ ಹೆಂಗೆಳೆಯರು - ''ಏನ್ರೀ! ಈ ನಿಮ್ಮ ಮಾಲ್ತಿಯಿಂದಲಾದ್ರೂ ಕೊಂಚ hints ತಗೊಳ್ಳಿ, figure maintain ಮಾಡೋದು ಹೇಗೆ ಅಂತ. ಏನೋಪ್ಪ ಅವಳು ಹಾಗಿರೋದು! ನೀವು ಹೀಗಿರೋದು! ಸ್ವಲ್ಪಾನೂ ಸರಿಯಿಲ್ಲ'' ಅನ್ನೋರು. ಇನ್ನೂ ಸ್ವಲ್ಪ ಸದರ ಬಿಟ್ರೆದ್ರೆ ಮನೆಗೆ ಬರೋ ನಮ್ಮೆಜಮಾನ್ರ ಹೆಂಗೆಳೆಯರೂ ಹಾಗೇ ಅಂದಿರೋರೋ ಏನೋ!

ನಾನಂತೂ ಸಣ್ಣಗಾಗೋ ಯೋಚನೆ ಬಿಟ್ಟುಬಿಡ್ತಾಯಿದ್ದೆ. ಸರಿ! ಅವ್ಳನ್ನೇ ದಪ್ಪ ಮಾಡ್ಬಿಟ್ರೆ ಎಲ್ಲಾರ ಸಮಸ್ಯೆನೂ ತಪ್ಪುತ್ತಲ್ಲಾಂತ ಅವಳನ್ನ ಕೂರ್ಸಿ- ನಾನೇ ಆದಷ್ಟು ಮನೆ ಕೆಲ್ಸ ಮಾಡಿ - ಅವಳಿಗೆ ಬೇಕೋ ಬೇಡ್ವೋ ತುಪ್ಪ ತೈಲ ಸುರ್ದು ತಟ್ಟೆ ಭರ್ತಿ ಅನ್ನ ಬಡ್ಸಿ - ಅವಳು ತಿಂತಾಯಿದ್ರೆ - ನಾನು ಅವಳ ಮೇಲೆ ಕಣ್ಣಾಕಿ ನನ್ನ ಹಣೇ ಬರಹಾನ ಬೈಕೋತಾಯಿದ್ದೆ. ಹೊಟ್ಟೆಕಿಚ್ಚು ಅನ್ನೋ ಬೆಂಕೀಲಿ ಬೆಂದ್ರೆ ಚರ್ಮ ಮೂಳೆಗಳ ಹಂದರವಾಗ್ತೀವಿ ಅಂತ ತಿಳಿದೋರ ಅಂಬೋಣ. ಆದ್ರೆ ನಾನು ಸಣ್ಣ ಆಗ್ಲಿಲ್ಲ. ಅವಳು ದಪ್ಪ ಆಗ್ಲಿಲ್ಲ. ಸ್ವಲ್ಪ ಕಳ್ಳ ಕೈ ತಲೆಹರಟೆ ಬಿಟ್ರೆ ವ್ಯಕ್ತಿ ಪರವಾಗಿಲ್ಲ.

ಎರಡನೆಯವಳು - ಚಿನ್ನಿ ಉರುಫ್ ಚಿನ್ನಮ್ಮ! ಅವಳು ತೆಳ್ಳಗಲ್ಲದೆ ಬೆಳ್ಳಗೆ ಬೇರೆ ಇರೋದುಂಟೇ! ಹಾಳಾಗ್ಹೋಗ್ಲೀಂದ್ರೆ ಅವಳ ಕೆಲಸ ಮಾತ್ರ ದೇವ್ರಿಗೆ ಪ್ರೀತಿ. ಗುಡ್ಸೋವಾಗ ಕಾಲ್ಮುಂದಿರೋ ಕಸ ಕಣ್ಣಿಗೆ ಬೀಳ್ತಿರಲಿಲ್ಲ - ಪಾತ್ರೆಗಂಟಿರೋ ಮುಸುರೆ ಮೊದ್ಲೇ ಕಾಣ್ತಿರಲಿಲ್ಲ. ಆದ್ರೆ ಅವಳ ಚಾಕಚಕ್ಯತೇನ ಮಾರ್ಕೆಟ್ಟಿಗೆ ಕರ್ಕೊಂಡು ಹೋದಾಗ ನೋಡ್ಬೇಕು! ಸಾಮಾನೆಲ್ಲಾ ತಗೊಂಡಾದ್ಮೇಲೆ ನಾನು ಯಾರಿಗೂ ಗೊತ್ತಾಗದ ಹಾಗೆ ಬೆರಳುಗಳ ಸಹಾಯದಿಂದ ಕೂಡಿ ಕಳೆದು ಮಾಡಿ ಇಷ್ಟು ಹಣ ಆಯ್ತೂಂತ ಹೇಳೋದಕ್ಕೆ

ಮೊದ್ಲೇ ಇವ್ಳು ಮನಸ್ಸಿನಲ್ಲೇ ಲೆಕ್ಕ ಹಾಕಿ ''ಅಯ್ಯೋ! ಅದ್ಯಾಕಮ್ಮ ಅಷ್ಟು ಕಷ್ಟ ಪಡ್ತೀರ. ಇಷ್ಟು ರೂಪಾಯಿಯಾಗಿದೆ ಬೇಗ ಕೊಡೀ, ನನಗೆ ಹೊತ್ತಾಯ್ತು. ಕೊಂಚ ಬಿರ್ರನೆ ಕಾಲ್ಹಾಕಿ'' ಅಂತ ಅಂದ್ರೆ ನನಗೆ ಹೇಗನ್ನಿಸ್ಬೇಡ. ಅದ್ರಲ್ಲೂ ಆ ಅಂಗ್ಡಿಯೋರೆಲ್ಲಾ 'ಓದಿದೋರ ಮುಸುಡಿ ನೋಡು ಕೊಂಚ'! ಅನ್ನೋ ಹಾಗೆ ಒಬ್ಬರನ್ನೊಬ್ಬರು ನೋಡ್ಕೊಂಡು ಕಿರುನಗೆ ಬೀರೋರು. ನಾನು ನನ್ನ ಕೋಪಾನ ಮರೆ ಮಾಡ್ಕೊಂಡು ''ಸರಿ! ಸರಿ! ತಲೆ ಹರಟೆ ಮಾಡ್ಬೇಡ! ಚೀಲ ಎತ್ಕೋ! ಬೇಕೋ ಬೇಡ್ವೊ ಎಲ್ಲಾದಕ್ಕೂ ಬಾಯ್ಹಾಕ್ತಾಳೆ! ಯಾರೇ ನಿನ್ನ ಎಷ್ಟಾಯ್ತೂಂತ ಕೇಳಿದ್ದು!'' ಅಂತ ರೇಗೋವೆ. ಅವಳು ಹೇಳ್ದ ಹಾಗೆ ಎಷ್ಟೇ ಬಿರ ಬಿರನೆ ಕಾಲ್ಹಾಕಿದ್ರೂ ಅವಳಿಗಿಂತ ಎಷ್ಟೋ ಹಿಂದೆ ಇರ್ತಿದ್ದೆ.

ಅಂದು ಒಂದು ದಿನ ''ಏನೇ ಹೀಗೆ ಪಾತ್ರೆ ತೊಳ್ದಿದ್ದೀ! ಬರ್ತಾ ಬರ್ತಾ ನಿನ್ಗೆಲ್ಲ'' ಅಂತ ಪೂರ್ತಿ ಅನ್ನೋದಕ್ಕಿಲ್ಲ - ''ಅಯ್ಯಾ! ನೀವು ಮೈ ಬಗ್ಸಿ ನಿಮ್ಮ ಕೆಲ್ಸ ಮಾಡ್ಕೊಳ್ಳಿ. ನಿಮ್ಮ ನೀರು ಮೈ ಆದ್ರೂ ಕರಗುತ್ತೆ'' ಅಂತ ನನಗೆ ಕೇಳೋ ಹಾಗೆ ಗೊಣಗೋದುಂಟೇ!

ಆ ಕ್ಷಣ ಮಾರಿ ಹಾಗೇ ಓಡ್ಬಂದು ಅವಳ ಕೈಯಿಂದ ಕಸ ಪರಕೇನ ಕಿತ್ಕೊಂಡು ''ಹಾಳಾಗಿ ಹೋಗು! ಇನ್ಮೇಲೆ ಇಲ್ಲಿಗೆ ಬಂದು ನಿನ್ನ ಮುಖ ತೋರಿಸ್ಬೇಡ!'' ಅಂತ ಓಡ್ಸೇನೋ ಓಡ್ಸಿಬಿಟ್ಟೆ. ಆದ್ರೆ ಮಾರನೇ ಬೆಳಗ್ಗೇನೆ ಅವಳು ಆ ರಸ್ತೇಲಿ ಹೋಗೋದನ್ನ ಕಾಯ್ತಾಯಿದ್ದು - ಎರಡು ಹಳೇ ಸೀರೆಗಳನ್ನ ಲಂಚ ಕೊಟ್ಟು ಪುನಃ ಕೆಲಸಕ್ಕೆ ಕರ್ದೆ.

ಈಗಿರೋಳು ಲಕ್ಷ್ಮಮ್ಮ! ಎಲ್ಲಾರಿಗಿಂತ ಒಂದು ಕೈ ಮೇಲು ಅವಳು ನನಗಿಂತ ಜೋರಾಗಿ ಹಬ್ಬ ಹರಿದಿನ ಮಾಡ್ತಾಳಂತೆ. ಮೊನ್ನೆ ಮೊಮ್ಮಗಳ ನಾಮಕರಣ ಜೋರಾಗಿ ಛತ್ರದಲ್ಲಿ ಮೂವತ್ತು ನಲ್ವತ್ತು ಸಾವಿರ ಖರ್ಚುಮಾಡಿ ಮಾಡಿದ್ದಾಳಂತೆ. ನಾಲ್ಕು ತರಹ ಸಿಹಿ ಮಾಡ್ಸಿದ್ಲಂತೆ. ''ಅದ್ಯಾಕೆ ಹಾಗಾದ್ರೆ ಮನೆ ಕೆಲ್ಸ ಮಾಡಿ ದುಡೀತೀಯಾ'' ಅಂತ ಕೇಳಿದ್ರೆ

''ಸುಮ್ಕೆ ಮನೇಲಿ ಕೂತು ಬೇಜಾರು'' ಅಂದ್ಲು.

ಮೊನ್ನೆ ಯುಗಾದಿ ಹಬ್ಬದ ದಿನ ''ಊಟ ಮಾಡ್ಕೊಂಡ್ಹೋಗೇ'' ಅಂತ ಹೇಳಿ ತಟ್ಟೆ ಭರ್ತಿ ಊಟ ಕೊಟ್ಟೆ. ಎಲ್ಲಾ ತಿಂದ್ಲು. ಒಬ್ಬಟ್ಟನ್ನ ನೋಡಿ ಹಿಂದೆ ಮುಂದೆ ತಿರುಗಿಸಿದ್ಲು. ''ಇದೇನ್ರಮ್ಮಾ ಇದು! ಒಬ್ಬಿಟ್ಟು ಅಂತೀರಿ ಒಳ್ಳೆ ಬೆಲ್ಲದ

ರೊಟ್ಟಿಹಾಗೆ ದಪ್ಪಕ್ಕೆ ಗಟ್ಟಿಯಾಗಿ ತಟ್ಟಿದ್ದೀರ! ಇಷ್ಟು ವಯಸ್ಸಾಗಿದೆ ಇನ್ನೂ ಒಬ್ಬಿಟ್ಟು ಮಾಡೋದಕ್ಕೆ ಕಲ್ತಿಲ್ವೇ'' ಅನ್ನೋದೆ.

ಥೂ! ಹಾಳಾದೋಳೇ! ಕೊಟ್ಟಿದ್ದೆಲ್ಲಾ ಬಾಯ್ಮುಚ್ಕೊಂಡು ಗದಕ್ತೀ! ಮೇಲೆ ಹೀಗೆ ಹಂಗಿಸ್ತೀಯಾ'' ಅಂತ ಮನಸ್ಸಿನಲ್ಲಿ ಬೈಕೊಂಡು ''ಹೌದು! ಇಷ್ಟು ವಯಸ್ಸಾಗಿದೆಯಲ್ಲಾ ನಿನಗೆ ಓದೀ ಬರದೂ ಮಾಡೋದಕ್ಕೆ ಬರುತ್ತೇನೂ ಹೇಳು!'' ಅಂತ ಜಗಲಿ ಮೇಲಿನ ಪಾತ್ರೆ ಕುಕ್ಕಿದೆ.

ಆಗ್ಲೆ ಅಲ್ಲಿ ಕೂತಿದ್ರಲ್ಲ ಡ್ರಾಯಿಂಗ್ ರೂಮಿನಲ್ಲಿ ನಮ್ಮ ಕ್ಲಬ್ಬಿನ ವಯ್ಯಾರಿಯರಿಬ್ರೂ 'ಕಿಸಕ್' ಅಂತ ನಕ್ಕಿದ್ದು ಕೇಳಿಸ್ತು, ಇನ್ನು ಕ್ಲಬ್ಬಿನಲ್ಲೆಲ್ಲಾ ಹರಡುತ್ತಾರೆ ಬೇರೆ!

★★★

ಜೈ ಎನ್ನಲೆ ಮಿನಿಗೆ?

ಬಾಲ್ಯದಲಿ ಸೋತೆ
ಭಾರತದ ಜೈ-
ಮಿನಿಗೆ

ಶಾಲೆಯಲಿ ಸೋತೆ
ಷಟ್ಪದಿಯ ಭಾ-
ಮಿನಿಗೆ

ಹರಯದಲಿ ಸೋತೆ
ಕಣ್ಸೆಳೆದ ಕಾ-
ಮಿನಿಗೆ

ವ್ಯವಹಾರದಲಿ ಸೋತೆ
ಚದುರೆ ಸಾದಾ-
ಮಿನಿಗೆ

ಈಗ ಸೋತೆ
ಸುಂದರ ಕವನ
ಮಿನಿಗೆ

ಜೈ ಎನ್ನಲೇ ಹೀಗೆ
ಸದಾ ಈವರೆಗೆ
ನನ್ನ ಸೋಲಿಸಿದ
ಮಿನಿಗೆ?

- ಎನ್ ಪ್ರಕಾಶ್

ನನ್ನ ತಂಗಿ ಮದ್ವೇ ಫೋಟೋ

– ಬಿ.ಎಸ್. ಪ್ರಭಾಕರ್

ನನ್ನ ತಂಗಿ ಮದ್ವೇ ಫೋಟೋ ಕಣ್ಣಿಗೆ ಬಿದ್ದಾಗಲೆಲ್ಲಾ ಎಪ್ಪತ್ತೈದು ಸಂವತ್ಸರಗಳಷ್ಟು ಹಿಂದೆ ನಡೆದ ಕೆಲವು ಮರೆಯಲಾಗದ ಘಟನೆಗಳು ನೆನಪಿಗೆ ಬರುತ್ತವೆ.

ನಮ್ಮ ಹಳ್ಳಿ ಬಲು ಹಿಂದುಳಿದ ಕುಗ್ರಾಮವಾಗಿತ್ತು. ಯಾವ ಸೌಕರ್ಯಗಳು ಇಲ್ಲದಿದ್ದರೂ ಸಹ ನಂ ತಂದೆ ತಾಯಿ ನನ್ನ ತಂಗಿ ಮದ್ವೇನ, ಆಗಿನ ಕಾಲ, ಧರ್ಮ ಮತ್ತು ಗಂಡಿನವರ ದರ್ಬಾರು ದೌಲತ್ತಿಗೆ ಹೆದರಿ, ಮೂರು ದಿನ ವಿಜೃಂಭಣೆಯಿಂದ ಮಾಡಿ, ತಮ್ಮ ತಲೆಯ ಮೇಲಿದ್ದ ಜವಾಬ್ದಾರಿಯಲ್ಲಿ ಶೇಕಡ ಹದಿನೇಳರಷ್ಟು ಕಡಿಮೆ ಮಾಡಿಕೊಂಡು, ಅಷ್ಟೇ ಶೇಕಡಾವಾರು ಮನಶ್ಶಾಂತಿ ಪಡೆದುಕೊಂಡರು.

ಗಂಡಿನವರ ಅಪೇಕ್ಷೆಯಂತೆ ನಂತಂದೆ ಮದುವೆಯ ಅಂತಿಮ ದಿನ ಫೋಟೋ ಕಾರ್ಯಕ್ರಮವನ್ನೂ ಏರ್ಪಡಿಸಿದ್ದರು. ಇದರ ಬಗ್ಗೆ ಗಂಡಿನವರಿಗೆ ಮುಂಚಿತವಾಗಿ ವಿಷಯ ತಿಳಿಸಿ, ಹೊತ್ತಿಗೆ ಸರಿಯಾಗಿ ಸಿದ್ಧವಾಗಿರಬೇಕೆಂದೂ ಬೇಡಿಕೊಂಡಿದ್ದರು.

ಆದಿನ ನಾವೆಲ್ಲಾ ಮುಂಚಿತವಾಗಿಯೇ ನಮ ನಮಗೆ ತೋಚಿದಂತೆ, ಶೃಂಗರಿಸಿಕೊಂಡು ಫೋಟೋದೊಳಗೆ ಬೀಳಲು ಸಿದ್ಧವಾಗಿದ್ದೆವು. ನಮಗೆಲ್ಲರಿಗೂ ಫೋಟೋ ತೆಗೆಸಿಕೊಳ್ಳುವುದು ಪ್ರಪ್ರಥಮ ಅನುಭವವಾದ್ದರಿಂದ, ಅರ್ಥವಿಲ್ಲದ ಉತ್ಸುಕತೆ ನಮ್ಮೆಲ್ಲರನ್ನು ತುದಿಗಾಲಮೇಲೆ ನಿಲ್ಲುವಂತೆ ಮಾಡಿತ್ತು. ಆ ಅಮೃತ ಘಳಿಗೆಗಾಗಿ ಕ್ಷಣಗಳನ್ನು ಎಣಿಸುತ್ತಿದ್ದೆವು.

ಫೋಟೋ ಗ್ರಾಫರ್ ಕೊಟ್ಟ ಮಾತಿಗೆ ಸರಿಯಾಗಿ ಹಾಜರಾದ, ಬಂದವನೇ ಮನೆಯ ಮುಂದೆ ಪ್ರಶಸ್ತವಾದ ಜಾಗ ಆರಿಸಿಕೊಂಡು, ಅಲ್ಲಿ ಮೂರು ಕೊಳವೆ ಕಾಲಿನ ಸ್ಟ್ಯಾಂಡನ್ನು ಅಗಲಿಸಿ ನೆಟ್ಟು, ಅದರ ಮೇಲೆ ಕರೀ ಬಣ್ಣದ ಡಬ್ಬದಂತಿದ್ದ ಕ್ಯಾಮರಾವನ್ನು ಸಿಕ್ಕಿಸಿದ. ಕರೀ ಬಣ್ಣದ ಬಟ್ಟೆಯಿಂದ ಕ್ಯಾಮರಾಗೆ ಗುಬರು ಹಾಕಿ,

ಆನಂತರ ನಂತಂದೆ ಬಳಿಗೆ ಬಂದು ''ಸ್ವಾಮಿ, ಎಲ್ಲಾ ಸಿದ್ಧವಾಗಿದೆ. ಫೋಟೋ ತೆಗ್ಯೋವಾಗ ಸೂರ್ಯ ಪರಮಾತ್ಮ ಎಲ್ಲರನ್ನೂ ನೋಡ್ತಾ ಇರ್ಬೇಕು. ಅವ್ನು ಅಸ್ತಮಿಸಿದ್ಮೇಲೆ ನನ್ ಕ್ಯಾಮ್ರ ಕುರುಡಾಗಿಬಿಡುತ್ತೆ. ಆಮೇಲೆ ನೂರಾರು ಪಂಜು ಹಚ್ಚಿಟ್ರೂ ಪ್ರಯೋಜ್ನ ಆಗಲ್ಲ'' ಅಂತ ಸಾಹಿತ್ಯಾತ್ಮಕವಾಗಿ ಬುದ್ಧಿವಂತಿಕೆಯಿಂದ ಎಚ್ಚರಿಕೆ ನೀಡಿದ.

ನಂತಂದೆ ಕ್ಷಣದಲ್ಲಿ ಕಾರ್ಯೋನ್ಮುಖರಾದರು. ಟೇಬಲ್ಲು, ಬೆಂಚು, ಕುರ್ಚಿಗಳನ್ನು ತರಿಸಿ ಫೋಟೋಗ್ರಾಫರ್ ತೋರಿಸಿದ ಜಾಗದಲ್ಲಿ ಇಡಿಸಿದರು. ನೆಲದ ಮೇಲೆ ಕೂಡುವ ಮಕ್ಕಳು ಹುಡುಗರಿಗಾಗಿ ಮಂದಲಿಗೆಗಳೂ ಹಾಸಲ್ಪಟ್ಟುವು.

ಆನಂತರ ನಂತಂದೆ, ತುಂಬಾ ರಚ್ಚೆ ಮಾಡುತ್ತಿದ್ದ ನಮ್ಮ ಚಿಕ್ಕಪ್ಪನ ಎರಡು ವರುಷದ ಮಗುವನ್ನು ಎತ್ತಿಕೊಂಡು, ಗಂಡಿನ ಕಡೆಯವರನ್ನು ಫೋಟೋ ಕಾರ್ಯಕ್ರಮಕ್ಕೆ ಆಹ್ವಾನಿಸಲು ಬಿಡದಿ ಮನೆಗೆ ಉತ್ಸಾಹದಿಂದ ಧಾವಿಸಿದರು. ಕಾರಣವಿಲ್ಲದಿದ್ದರೂ ಅವರ ಹಿಂದೆ ನಾನೂ ಬಿಡದಿ ಮನೆಗೆ ಹೋಗಿ, ಮುಂಬರುವ ಅಪ್ರಿಯ ಪ್ರಸಂಗಕ್ಕೆ ಕಾರಣವಾದೆನಲ್ಲದೆ, ನಂತಂದೆಯವರು ನೀಡಿದ ಮುಷ್ಟಿ ಪ್ರಹಾರದ ಬಿಸಿಬಿಸಿ ರುಚಿಯನ್ನು ಅನುಭವಿಸಬೇಕಾಯಿತು.

ಬಿಡದಿ ಮನೆಯ ಪ್ರವೇಶದ್ವಾರದ ಜಗುಲಿಯ ಮೇಲೆ ಗಂಡಿನ ತಂದೆ, ಚೆನ್ನಾಗಿ ಬಲಿತು ಬಿರುಕು ಬಿಟ್ಟಿದ್ದ ಜಂಬೋ ಗಾತ್ರದ ಹಲಸಿನ ಹಣ್ಣನ್ನು ಉಗ್ರ ನರಸಿಂಹ ಹಿರಣ್ಯಕಶಿಪುವಿನ ಒಡಲನ್ನು ಬಗೆದಂತೆ ಬಗೆದು, ರಸ ಭರಿತ ತೊಳೆಗಳನ್ನು ಹೊರಗೆತೆದು ಕುಪ್ಪೆ ಹಾಕುತ್ತಿದ್ದರು. ಅದರ ಸುತ್ತಾ ಐದಾರು ಬಾಲಕ ಬಾಲಕಿಯರು ತಮ್ಮ ಪಾಲಿಗಾಗಿ ಬಕಗಳಂತೆ ಕಾಯುತ್ತಿದ್ದರು.

ನಂತಂದೆಗೆ ಬೀಗರಮೇಲೆ ಕಂಡಾಪಟ್ಟೆ ಸಿಟ್ಟು ಬಂತು. ಆದರೆ ಅದನ್ನು ತೋರಿಸಿಕೊಳ್ಳುವ ಧೈರ್ಯವಿರಲಿಲ್ಲ. ಬಲವಂತವಾಗಿ ಕೃತಕ ಸೌಜನ್ಯದ ನಗೆ ಬೀರಿದರು ಮಾತ್ರ. ಅಷ್ಟರಲ್ಲಿ ಬೀಗರು ನಂತಂದೆ ಕಡೆಗೆ ಹೆಮ್ಮೆಯ ನೋಟ ಹರಿಸಿ, ''ಹಿಃ ಹಿಃ'' ಅಂತ ಒಣ ಪ್ರತಿಷ್ಠೆಯ ಕ್ಷುಲ್ಲಕ ನಗೆ ಬೀರಿ ''ರಾಯ್ರೇ, ಸರ್ಯಾದ ಸಮ್ಯಕ್ಕೆ ದಯಮಾಡ್ಸಿದ್ರಿ. ಸೊಗ್ಸಾಗಿದೆ ಹಣ್ಣು. ಅಪ್ಪ ಜೇನ್ ತುಪ್ಪಾನ ತರ್ಸಿದೀನಿ. ಬನ್ನೀ ರಾಯ್ರೇ ಬಾಜಿ ಕಟ್ಟೋಣ'' ಅಂತ ಸವಾಲ್ ಎಸೆದರು.

ನಂತಂದೆಗೆ ಅಳಬೇಕೋ ನಗಬೇಕೋ ತಿಳಿಯಲಿಲ್ಲ. ''ದೇವ್ರು ಬಾಜಿ, ಗೀಜಿ ಆಮೇಲೆ ಆಗ್ಲಿ. ಈಗ ಫೋಟೋ ಗ್ರಾಫರ್ ನಮಗಾಗಿ ಕಾಯ್ತಾ ಇದ್ದಾನೆ. ದಯಮಾಡಿ ಈಗ್ಲೇ ಬರ್ಬೇಕು'' ಅಂತ ಬೇಡಿಕೊಂಡರು.

ಬೀಗರು ಬೆಚ್ಚಿದರು. ''ಅಯ್ಯೋ ಹಾಳ್ ಮರ್ವೆ, ನೀವು ಬಂದು ಕರೀದೇ ಇದ್ದಿದ್ರೆ, ನಾನು ಇಷ್ಟೂ ಹಣ್ಣು ಮುಗ್ಯೋ ತನ್ಕ ಜಾಗ ಬಿಟ್ಟು ಏಳ್ತಿರ್ಲಿಲ್ಲ. ದಯ್ವಿಟ್ಟು ಕ್ಷಮ್ಸಿ. ಈಗ್ಲೇ ಬರ್ತೀನಿ. ಹಾಗೇ ದಯ್ಮಾಡಿ, ಒಳ್ಗೆ ಪಾದ ಬೆಳ್ಸಿ, ನನ್ ಯಜ್ಮಾನಿಗೂ ತಿಳ್ಸಿ ಉಪ್ಕಾರ ಮಾಡಿ, ಅವ್ರಿಗೆ ಯಾವ್ದೂ ಜ್ಞಾಪ್ಕ ಇರಲ್ಲ. ಕೂತ್ರೆ ಗೆದ್ಲು ಹಿಡಿದ್ರೂ ಏಳಲ್ಲ. ಜೊತ್ಗೆ ತುಂಬಾ ಕುಸ್ವಿಷ್ಟಿ. ನಂಹುಡ್ಗ ನಿದ್ದೆ ಮಾಡ್ತಾ ಇರ್ಬೌದು, ನಾಲ್ಕು ಬಾರ್ಸಿ, ಒದ್ದು ಕರ್ಕೊಂಡು ಹೋಗಿ'' ಅಂತ ಹೇಳಿ, ಆನಂತರ ''ಮಕ್ಳ ಎಲ್ಲಾ ಬನ್ನಿ ಫೋಟೋ ತೆಗೀತಾರಂತೆ'' ಅಂತ ಮಕ್ಕಳನ್ನು ಹುರಿದುಂಬಿಸಿ, ಎದ್ದು ಹೋದರು, ಕೈ ತೊಳೆದುಕೊಂಡು ಬರಲು.

ನಂತಂದೆ, ಬೀಗಿತ್ತಿಯನ್ನು ಕಂಡು ವಿಷಯ ತಿಳಿಸಲು ಒಳಗಡೆಗೆ ಹೆಜ್ಜೆ ಹಾಕಿದರು.

ಒಳಗಡೆ ನಸು ಬೆಳಕಿನಲ್ಲಿ ಬೀಗಿತ್ತಿ ತಮ್ಮ ಬೆಳ್ಳಿ ಬಣ್ಣದ ನೀಳವಾದ ತಲೆಕೂದಲನ್ನು ಮುಖದ ಭಾಗದ ಮೇಲೆಲ್ಲಾ ಹರಡಿಕೊಂಡು, ಸಿಕ್ಕಟಿಕೆಯಿಂದ ಹೇನನ್ನು ಬೇಟೆ ಆಡುತ್ತಿದ್ದರು. ಅವರಿಗೂ ಫೋಟೋ ಕಾರ್ಯಕ್ರಮದ ಬಗ್ಗೆ ಕಾಳಜಿ ಇದ್ದಂತೆ ಕಾಣಲಿಲ್ಲ. ಮದುಮಗ ತೂಕಡಿಸುತ್ತಾ ಹಗಲುಗನಸು ಕಾಣುತ್ತಿದ್ದ.

ನಂತಂದೆ ಉಕ್ಕುತ್ತಿದ್ದ ಅಸಮಾಧಾನವನ್ನು ನುಂಗಿಕೊಂಡು ''ತಾಯೀ, ದೊಡ್ಡ ಮನ್ಸುಮಾಡಿ, ಬೇಗ ಫೋಟೋಗೆ ಬಂದ್ರೆ, ತುಂಬಾ ಉಪ್ಕಾರ ಆಗುತ್ತೆ. ಬೆಳ್ಕು ಹೋದ್ಮೇಲೆ ಫೋಟೋ ಬರೋಲ್ವಂತೆ'' ಅಂತ ಬೇಡಿಕೊಂಡರು. ಬೀಗಿತ್ತಿ ತಲೆ ಎತ್ತದೆ ''ಫೋಟೋನೇ? ಅಯ್ಯೋ ಬಿಡಿ, ನನ್ನಂಥ ಮುದಿ ಗೂಬೆಗೆ ಅದೆಂತ ಫೋಟೋ?'' ಅಂತ ನೀರಸವಾಗಿ ಉತ್ತರಿಸಿದರು, ಹೇನಿನ ಬೇಟೆಯನ್ನು ಮುಂದುವರಿಸುತ್ತಾ.

ನಂತಂದೆ ಏನೋ ಹೇಳಬೇಕೆಂದಿದ್ದರು ಅಷ್ಟರಲ್ಲಿ ಬೀಗಿತ್ತಿಯ ವಿಚಿತ್ರ ಭಂಗಿಯನ್ನು ನೋಡಿದ ನಂತಂದೆ ತೋಳಲ್ಲಿದ್ದ ಮಗು, ಚಿಟಾರನೆ ಚೀರಿ, ಗಡಗಡ ನಡುಗಿ, ನಂತಂದೆ ಅಂಗಿಯನ್ನು ಬೆಚ್ಚಗೆ ತೇವ ಮಾಡಿತು.

ಮಗುವಿನ ಚೀರುವಿಕೆಯಿಂದ ಬೆಚ್ಚಿದ ಬೀಗಿತ್ತಿ "ಮಗು ಯಾಕೆ ಕಿರಿಚ್ಕೊಂಡ್ತು?" ಅಂತ ಕೇಳಿದರು.

ನಂತಂದೆ ಉತ್ತರ ಕೊಡುವಷ್ಟರಲ್ಲಿ ನಾನು "ಅಜ್ಜೀ, ನೀವು ಮುಖಾನ ಬೆಳ್ಳಿ ಕೂದ್ಲಿಂದ ಮರೆ ಮಾಡ್ಕೊಂಡಿದ್ರಲ್ಲ, ನಂ ಪಾಪೂಗೆ ನೀವು ಹೆಣ್ಣು ಪಿಶಾಚಿ ತರ ಕಾಣ್ಸಿರ್ಬೇಕು" ಅಂತ ಹಿಂದೂ ಮುಂದೂ ಯೋಚಿಸದೆ ಅಂದುಬಿಟ್ಟೆ.

ತಕ್ಷಣ ಬೀಗಿತ್ತಿಗೆ ಭಯಂಕರ ಕೋಪ ಬಂತು. ಸೆಟೆದು ನಿಂತು "ಏನ್ ಬಗುಳ್ದ್ಯೋ ಅನಿಷ್ಟ್ಮುಂಡೇನೇ? ನಾನ್ಯಾಕೋ ಪಿಶಾಚಿ? ನಿಂಅಮ್ಮ ಕರ್ಪಿ, ಇದಾಳಲ್ಲ ಹಿಡಂಬಿಗಾತ್ರ ಅವ್ಳು ಪಿಶಾಚಿ. ನಿನ್ ತಂಗೀರಿದಾರಲ್ಲ ಅಶ್ವತ್ಥಕ್ಕೆ ಹಾಕೋ ಅಷ್ಟು, ಅವ್ರು ಪಿಶಾಚಿಗಳು" ಅಂತ ನಂಗೆ ಬೈದು, ಆನಂತರ ನಂತಂದೆಗೆ "ಆಹಾಹ, ಏನೂ ಅರೀದ ಹುಡ್ಗನ್ನ ಮುಂದಿಟ್ಕೊಂಡು ನಂಗೆ ಪಿಶಾಚಿಪಟ್ಟ ಕಟ್ತಿ ಇದೀರಾ? ನಿಂ ಯೋಗ್ತೇಗೆ ಇಷ್ಟು ಬೆಂಕಿ ಹಾಕ. ಒಂದೊಳ್ಳೆ ಮೇಳ ತರ್ಸೋಕೆ ಯೋಗ್ತೇ ಇಲ್ಲ. ಮೇಳಾನಾ ಅದು? ಒಳ್ಳೆ ನರಿ ಅತ್ತಾಗಿತ್ತು" ಅಂತ ತರಾಟೆಗೆ ತೆಗೆದುಕೊಂಡರು.

ಬೀಗಿತ್ತಿ ನಿಷ್ಟುರ ಮಾಡುತ್ತಿದ್ದುದು ನಿಲ್ಲುವಷ್ಟರಲ್ಲಿ ನಂತಂದೆ ನನ್ನ ಬೆನ್ನ ಮೇಲೆ ನಾಲ್ಕೈದು ಬಾರಿ ತದುಕಿದ್ದರು. ಆನಂತರ ಬೀಗಿತ್ತಿಗೆ "ತಾಯೀ, ಮಹಾಪರಾದ್ವಾಯ್ತು, ಕಾಲ್ಗೆ ಬೀಳ್ತೀನಿ, ಕ್ಷಮ್ಸಿಬಿಡಿ, ಫೋಟೋಗೆ ಎಲ್ಲಾ ಬಂದಿದ್ದಾರೆ ತಾವೂ ದಯಮಾಡಿಸಬೇಕು. ಬೆಳ್ಕು ಕಡ್ಮೆ ಆದ್ಮೇಲೆ ಫೋಟೋ ಬರೋಲ್ವಂತೆ. ದೊಡ್ಡ ಮನ್ಸುಮಾಡಿ ದಯಮಾಡಿಸ್ಬೇಕು" ಅಂತ ಅಂಗಲಾಚಿ ಬೇಡಿಕೊಂಡರು.

"ಪಿಶಾಚಿಗಳನ್ನ ಯಾರೂ ಫೋಟೋ ತೆಗ್ಯಲ್ಲ. ತೆಗೆದ್ರೂ ಅದು ಫೋಟೋದಲ್ಲಿ ಬೀಳಲ್ಲ. ನಂಗೆ ಪಿಶಾಚಿ ಅಂತ ಕರಿದ್ರಲ್ಲ, ನಿಮ್ಗೆ ದೇವ್ರು ಒಳ್ಳೇದು ಮಾಡಲ್ಲ. ಫೋಟೋನೂ ಬೇಡ, ಗೂಟಾನೂ ಬೇಡ ನೀವ್ ನೀವ್ ಏನಾದ್ರೂ ಮಾಡ್ಕೊಂಡು ಹಾಯಾಗಿರಿ. ನಾ ಈಗ್ಲೇ ಊರ್ಗೆ ಹೊರ್ಟೋಗ್ತೀನಿ" ಅಂತೆಲ್ಲಾ ರೇಗಾಡತೊಡಗಿದರು.

ಗಲಾಟೆ ಕೂಗಾಟದಿಂದ ಮದುಮಗ ಎಚ್ಚರಗೊಂಡ. ಹಾಗೇ ಬೀಗರೂ ಕೈಗಳನ್ನು ತೊಳೆದುಕೊಂಡು ಬಂದರು. ಅವರಿಬ್ಬರೂ ಆಕೆಗೆ ಪರಿಪರಿಯಾಗಿ ಹಠ ಸಾಧಿಸಬಾರದೆಂದು ಬೇಡಿಕೊಂಡರೂ ಆಕೆ ಹಿಡಿದ ಹಠವನ್ನು ಬಿಡಲಿಲ್ಲ.

ಇಷ್ಟರಲ್ಲಿ ಸೂರ್ಯ ಇಳಿಯತೊಡಗಿದ್ದ. ಹೀಗಾಗಿ ವಿಧಿ ಇಲ್ಲದೆ ಬೀಗಿತ್ತಿಯನ್ನು ಹೊರತುಪಡಿಸಿ, ಬೇರೆಲ್ಲರೂ ಫೋಟೋ ತೆಗೆಸಿಕೊಳ್ಳುವಂತೆ ಗುರುಹಿರಿಯರು ನಿಶ್ಚಯಿಸಿದರು.

ಮೊದಲಿಗೆ ಮದುಮಗ ಮತ್ತು ಮದುಮಗಳು ಇಬ್ಬರೆ ಇರುವ ಫೋಟೋ ತೆಗೆಯಬೇಕೆಂದು ಬೀಗರು ಇಚ್ಛಿಸಿದರು. ಅದರಂತೆ ನವ ದಂಪತಿಗಳ ಫ಼ೆಜ್ಞೀಟೋವನ್ನು ಒಂದೆರಡು ನಿಮಿಷಗಳಲ್ಲಿ ತೆಗೆಯಲಾಯಿತು.

ಆನಂತರ ಗ್ರೂಪ್ ಫೋಟೋವಿಗಾಗಿ ನೆಂಟರು ಇಷ್ಟರನ್ನು ಆಹ್ವಾನಿಸಲಾಯಿತು. ಅಷ್ಟೊಂದು ಜನರನ್ನು ಕ್ಯಾಮರದ ವ್ಯಾಪ್ತಿಗೆ ಬರುವಂತೆ ಮಾಡುವುದು ಫೋಟೋಗ್ರಾಫ಼ರ್‌ಗೆ ಕೊಂಚ ಕಷ್ಟವಾಯಿತು. ಹೇಗೋ ಸಂಭಾಳಿಸಿ, ಎಲ್ಲರನ್ನೂ ಪ್ರತಿಷ್ಠಾಪಿಸಿ, ಆನಂತರ ಕ್ಯಾಮರ ಬಳಿ ಹೋಗಿ ಕರೀ ಬಟ್ಟೆಯಿಂದ ಗುಬರು ಹಾಕಿಕೊಂಡು, ಲೆನ್‌ಸಿನ ಮುಚ್ಚಳವನ್ನು ಕ್ಷಣಗಳಷ್ಟು ತೆಗೆದು ಪುನಃ ಮುಚ್ಚಬೇಕು ಅನ್ನುವಷ್ಟರಲ್ಲಿ, ಬೀಗಿತ್ತಿ ಕೈಕೇಯಿ ದಶರಥನ ಮೇಲೆ ಕೋಪಗೊಂಡ ರೀತಿಯಲ್ಲಿ ಸರಸರನೆ ಬಂದು ಕ್ಯಾಮರಾಗೆ ಬೆನ್ನುಮಾಡಿಕೊಂಡು ''ನನ್ನ ಬಿಟ್ಟು ಅದ್ಹ್ಯಾಗೆ ಫೋಟೋ ತೆಗೆಸ್ಕೊತೀರೋ ನಾನೂ ನೋಡೇ ಬಿಡ್ತೀನಿ'' ಅಂತ ನಿಂತುಬಿಟ್ಟರು.

ನಂತಂದೆ ತಾವು ಕೂತಿದ್ದ ಕುರ್ಚಿಯನ್ನು ಬೀಗಿತ್ತಿಗೆ ತೆರವು ಮಾಡಿಕೊಟ್ಟು, ತಾವು ಮಕ್ಕಳ ಜೊತೆ ಮಂದಲಗೆಯ ಮೇಲೆ ಕೂತುಕೊಂಡರು. ಫೋಟೋ ಗ್ರಾಫ಼ರ್‌ಗೆ ನಂತಂದೆ ನೆಲದ ಮೇಲೆ ಕೂತುಕೊಳ್ಳುವುದು ಇಷ್ಟವಾಗಲಿಲ್ಲ. ಅವರಿಗೆ ತಕ್ಕುದಾದ ಜಾಗ ಹುಡುಕಲು, ನಮ್ಮ ಬಳಿಗೆ ಬಂದು ಕೆಲವು ವರ್ಗಾವರ್ಗಿ ಮಾಡತೊಡಗಿದ. ಅಷ್ಟರಲ್ಲಿ ಒಂದು ಅನಿರೀಕ್ಷಿತ ಪ್ರಮಾದ ನಡೆದುಹೋಯಿತು. ನಮ್ಮ ಮನೆಯಲ್ಲಿದ್ದ ಕಪಿಲಾ ಎನ್ನುವ ಹಸುವನ್ನು ಮೇಯಿಸಿಕೊಂಡು ಹಿಂತಿರುಗಿ ಬಂದ ಆಳು, ನಾವೆಲ್ಲಾ ಶಿಸ್ತಿನಿಂದ ಗುಂಪಾಗಿ ಸೇರಿರುವುದನ್ನು ಕಂಡು, ಆಶ್ಚರ್ಯದಿಂದ ಮೈಮರೆತು, ಕಪಿಲಾಳ ಕುತ್ತಿಗೆಗೆ ಕಟ್ಟಿದ ಹಗ್ಗವನ್ನು ಕೆಳಗೆ ಬೀಳಿಸಿ ನಿಂತುಬಿಟ್ಟ. ಅವನ ಕೈಯಿಂದ ಸ್ವತಂತ್ರಗೊಂಡ ಕಪಿಲಾ ಒಂದು ಸಲ ನಮ್ಮ ಕಡೆಗೆ ಗಾಬರಿಯಿಂದ ನೋಡಿತು. ಆನಂತರ ಕರೀ ಬಟ್ಟೆಯಿಂದ ಗುಬರು ಹಾಕಿದ್ದ ಕ್ಯಾಮರ ಕಡೆಗೆ ನೋಟ ಹರಿಸಿತು. ಅದರ ಬುದ್ಧಿಗೆ ''ಇದು ನನ್ನ ಮೇಲೆ ದೌರ್ಜನ್ಯ ಮಾಡಲು ಹವಣಿಸುತ್ತಿರುವ ಗೂಳಿಯೇ

ಇರಬೇಕು'' ಎಂಬ ಭ್ರಮೆ ಉಂಟಾಯಿತೋ ಏನೋ, ಕೋಪದಿಂದ ಬುಸುಗುಟ್ಟುತ್ತಾ ಹಿಂಗಾಲನ್ನು ಕತ್ತೆಯಂತೆ ಜಾಡಿಸಿ, ಬಾಲವನ್ನು ಬಲವಾಗಿ ಅಲ್ಲಾಡಿಸಿ, ಕ್ಯಾಮರಾಮೇಲೆ ಜಬರದಸ್ತಿನಿಂದ ಆಕ್ರಮಣ ಮಾಡೇಬಿಟ್ಟಿತು. ಕ್ಷಣಗಳಲ್ಲಿ ಕ್ಯಾಮರಾದ ಕೊಳವೆ ಕಾಲುಗಳು ಅಂಕುಡೊಂಕಾಗಿ ಬಾಗಿತು. ಕ್ಯಾಮರ ಒಬ್ಬಟ್ಟಿನಂತೆ ಅಪ್ಪಚ್ಚಿಯಾಯಿತು. ಕರೀ ಬಟ್ಟೆಯಂತೂ ಹಲವಾರು ಕೌಪೀನಗಳಾದುವು.

ಗ್ರೂಪ್ ಫೋಟೋ ಶಾಶ್ವತವಾಗಿ ತೋಪ್ಕೊಂಡೋಗಿದ್ದು ನನ್ನಿಂದ್ಲೇ ಅಂತ ಬೀಗರು ಬಹಳ ಕಾಲದವರೆಗೆ ನಿಷ್ಠುರ ಮಾಡುತ್ತಲೇ ಇದ್ದರು.

ಫೋಟೋಗ್ರಾಫರ್‌ಗೆ ಆದ ನಷ್ಟವನ್ನು ನಂತಂದೆ ಕಟ್ಟಿಕೊಡುವಾಗಲಂತೂ ನನಗಾದ ಸಹಸ್ರನಾಮದ ಪೂಜೆನ ಇನ್ನೂ ನಾ ಮರೆತಿಲ್ಲ.

★★★

ಆಯಸ್ಸು

ಗಟ್‌ಮುಟ್ಟಾಗಿದ್ದ ತಾತನಿಗೆ ಹುಟ್ಟಿದ ಹಬ್ಬ ಮಾಡ್ಕೊಳೋ ಷೋಕಿ. ತೊಂಭತ್ತೇಳು, ತೊಂಭತ್ತೆಂಟು, ತೊಂಭತ್ತೊಂಭತ್ತು ವರ್ಷದ ಹುಟ್ಟಿದ ಹಬ್ಬ ಮಾಡ್ಕೊಂಡು ಫೋಟೋನೂ ತೆಗಸ್ಕೊಂಡ್ರು. ಮೂರೂ ವರ್ಷ ತಾತನ ಫೋಟೋ ತೆಗೆದ ಫೋಟೋಗ್ರಾಫರ್‌ಗೆ ತಾತನ್ ಚುಡಾಯಿಸಬೇಕು ಅಂತ ಅನಿಸ್ತು. "ಏನ್ ತಾತ್ ಮೂರು ವರ್ಷದಿಂದ ನಿಮ್ಮ ಹುಟ್ಟಿದ ಹಬ್ಬದ ಫೋಟೋ ತೆಗೀತಾ ಇದೀನಿ. ನಿಮ್ಮ ನೂರನೇ ವರ್ಷದ ಹುಟ್ಟಿದ ಹಬ್ಬದ ಫೋಟೋ ತೆಗೆಯೋ ಭಾಗ್ಯ ನನಗೆ ಸಿಗಬಹುದೇ" ಅಂತ ಕೇಳ್ದ. ಅದಕ್ಕೆ ತಾತ "ಸಿಕ್ಕರೂ ಸಿಗಬಹುದು ನಿನ್ನ ಆರೋಗ್ಯ ಚೆನ್ನಾಗಿ ಕಾಪಾಡ್ಕೊಂಡಿರು" ಅನ್ನೋದೇ!

- ನಕ್ಷತ್ರಿಕ

ನೆಗೆದು ಬಿದ್ದರು

– ಹೆಚ್.ಎಸ್. ಕೃಷ್ಣಸ್ವಾಮಿ

ಗಾಂಪರು ಶಿಷ್ಯರೊಡಗೂಡಿ ಲಂಡನ್ ಯಾತ್ರೆ (ಗೊತ್ತಿಲ್ಲದವರು ಶ್ರೀ ದಾಶರಥಿ ದೀಕ್ಷಿತರ ಮರಳಿಮಠಕ್ಕೆ ಓದಿ) ಮಾಡಿ ಬಂದರು. ಅಲ್ಲಿನ ಶಿಷ್ಯರು ಕೊಟ್ಟ ಕಾಣಿಕೆಗಳಿಂದ ಸ್ವಲ್ಪ ದುಡ್ಡೂ ಸೇರಿತ್ತು. ದುಡ್ಡು ಇದ್ದ ಮೇಲೆ ಅದನ್ನು ಹೆಚ್ಚು ಮಾಡುವ (ಇಲ್ಲವೇ ಕಳೆದುಕೊಳ್ಳುವ) ಯೋಚನೆ ಬರುವುದು ಎಲ್ಲರಿಗೂ ಸಹಜ. ನಿಜ, ಯಾರೂ ಕಳೆದುಕೊಳ್ಳಲು ಇಷ್ಟಪಡುವುದಿಲ್ಲ. ಲಾಟರಿ ಟಿಕೆಟ್ ತೆಗೆದುಕೊಳ್ಳುವವನೂ, ಕುದುರೆ ಬಾಲಕ್ಕೆ ದುಡ್ಡು ಕಟ್ಟುವವನೂ, ಜೂಜುಗಾರನೂ ದುಡ್ಡು (ಅಥವಾ ಹಣ) ದುಡಿಯುತ್ತೇನೆ ಎಂದೇ ತಿಳಿದುಕೊಂಡಿರುತ್ತಾನೆ. ಆದರೆ ಏನಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

ಗಾಂಪರಿಗೆ ಈ ರೀತಿಯಲ್ಲಿ ದುಡ್ಡು ಮಾಡುವ (ಕಳೆದುಕೊಳ್ಳುವ ಎನ್ನೋಣವೇ) ಯೋಚನೆಯಿರಲಿಲ್ಲ. ಲಂಡನ್‌ನಲ್ಲಿ ಎಷ್ಟೋ ಇಂಡಿಯನ್ ಹೋಟೆಲ್‌ಗಳು ದುಡ್ಡು ಮಾಡುತ್ತಿದ್ದುದನ್ನು ನೋಡಿದ್ದರು. ಹಾಗೇ ನಮ್ಮ ಉಡುಪಿ ಬಾಂಧವರು (ಎಲ್ಲರೂ ಅಲ್ಲ) ಪ್ರಪಂಚದ ಎಲ್ಲಾ ಕಡೆಗಳಿಗೂ ಹೋಗಿ ಹೋಟೆಲ್‌ಗಳನ್ನು ಮಾಡಿ ದುಡ್ಡು ಕೊಳ್ಳೆ ಹೊಡೆದಿದ್ದನ್ನು ಕೇಳಿದ್ದರು ಮತ್ತು ನೋಡಿಯೂ ಇದ್ದರು.

ಹೋಟೆಲ್ ತೆಗೆಯುವುದು ಒಂದು ಒಳ್ಳೆಯ ದುಡ್ಡು ಮಾಡುವ ಯೋಚನೆ ಎನ್ನಿಸಿತು. ನೀವು ಕೇಳಬಹುದು, ಸನ್ಯಾಸಿಗಳಿಗೇಕೆ ದುಡ್ಡು ಮಾಡುವ ಯೋಚನೆ ಎಂದು. ಎಲ್ಲವನ್ನೂ ಬಿಟ್ಟವರಿಗಲ್ಲವೇ ಎಲ್ಲರೂ ಬೇಕಾಗಿರುವುದು. ಅದು ಅವರಿಗೋಸ್ಕರ ಅಲ್ಲ. ಮಠವನ್ನು ಕಟ್ಟಬೇಕು, donation ಕಾಲೇಜುಗಳನ್ನು ತೆಗೆದು ದುಡ್ಡು ಮಾಡಿ ತಮ್ಮ ತಮ್ಮ ಜನಗಳಿಗೆ (?) ಸಹಾಯ ಮಾಡಲಾದರೂ ದುಡ್ಡು ಬೇಡವೇ? ಇರಲಿ, ಅಂತೂ ಅವರಿಗೆ ಹೋಟೆಲ್ ತೆಗೆಯುವ ಯೋಚನೆ ಬಂತು. ಅವರ ಶಿಷ್ಯರುಗಳೂ ಕುಮ್ಮಕ್ಕು ಕೊಟ್ಟರು (ತಮಗೂ ಏನಾದರೂ ಗಿಟ್ಟಬಹುದೆಂದು)

ಸರಿ, ಎಲ್ಲಿ ಹೋಟೆಲ್ ಪ್ರಾರಂಭ ಮಾಡುವುದು? survey ಮಾಡಿಸಿ consultant ಗಳ ಹತ್ತಿರ ಚರ್ಚೆ ಮಾಡಿದ ಮೇಲೆ, ರಾಜಧಾನಿ ಮರಳೂರು

ಅದರಲ್ಲೂ ದಂಡಿದ್ದ ಜಾಗ ಉತ್ತಮ ಎನಿಸಿತು. ಅಲ್ಲೇ ಅಲ್ಲವೇ foreign ಗಿರಾಕಿಗಳು (ಅಲ್ಲ ಶಿಷ್ಯರು) ಜಾಸ್ತಿ ತಂಗುವುದು. ಹೆಸರು, The Great Gampas Hotel ಎಂಬ ಹೆಸರಿಡುವುದೆಂದು ತೀರ್ಮಾನವಾಯಿತು. ಎರಡು ವರ್ಷಗಳ ನಂತರ ಮಾನ್ಯ ಮಂತ್ರಿಗಳೋರ್ವರಿಂದ ಉದ್ಘಾಟನೆಯೂ ಆಯಿತು.

ಬೋರ್ಡು ನೋಡಿದಾಗ ಸಸ್ಯಾಹಾರಿಗಳಿಗೆ ಬಹಳ ಸಂತೋಷವಾಯಿತು. The Great Gampas Hotel (Vegetarian) ಎಂದಿತ್ತು. ಸಸ್ಯಾಹಾರ ಎಂದರೇನು ಎಂದು ಒಂದು seminar ಮಾಡಿದರು. ಮಂಕ ಹೇಳಿದ, ಸಸ್ಯಾಹಾರ ಎಂದರೆ ಬರೀ ಹುಲ್ಲು ಮತ್ತು ಅದರ ರಸ ಗುರುಗಳೇ ನಮ್ಮ ಹೋಟೆಲಿಗೆ ಬರೀ ದನಗಳೇ ಗಿರಾಕಿಗಳಾಗುತ್ತವಲ್ಲ ಎಂದು ಗೋಳಾಡಿದ.

ಮಡೆಯ ಉವಾಚ; ಅಯ್ಯೋ ಮಂಕೇ, ಸಸ್ಯ ಎಂದರೆ ಬರೀ ಹುಲ್ಲು ಅಲ್ಲ, ಸೊಪ್ಪು ಸದೆ, ತರಕಾರಿಗಳೂ ಸೇರಿವೆ. ಮಡ್ಡಿ ತಕ್ಷಣ ಎದ್ದು ನಿಂತು ಅಕ್ಕಿ, ಗೋಧಿ ಮುಂತಾದುವು ಸೇರಿಲ್ಲವೇ ಎಂದು ಕೇಳಿದ. ಗುರುಗಳು ತಕ್ಷಣ ರೂಲಿಂಗ್ ಕೊಟ್ಟರು; ಅಯ್ಯೋ ಮಡ್ಡೀ, ಸಸ್ಯಾಹಾರದಲ್ಲಿ ಇವೆಲ್ಲಾ ಸೇರುತ್ತವೆ, ಬೇಕಾದರೆ ಮಡ್ಡಿ, ಸಾಂಬ್ರಾಣಿನೂ ಸೇರಿಸಿಕೋ ಎಂದು ಜೋಕ್ ಮಾಡಿ ನಕ್ಕರು. ಮರುಳ ಗೊಳ್ಳೆಂದ.

ಮುಂದೆ, ಪಾನೀಯಗಳು ಯಾವುವೆಂದು ತೀರ್ಮಾನವಾಗಬೇಕಾಯಿತು. ಮಡೆಯ ಬರೀ soft drinks ಎಂದ. ಮುಟ್ಠಾಳ ಅದರಲ್ಲಿ ಬೀರು, ವಿಸ್ಕಿಗಳೂ ಸೇರಿವೆಯೇ ಎಂದು ಕೇಳಿದ. ಮತ್ತೆ ಗುರುಗಳ ರೂಲಿಂಗ್ ಬಂತು (ಬಹುಶಃ ಲಂಡನ್ ಜ್ಞಾಪಿಸಿಕೊಂಡರು ಎಂದು ಕಾಣುತ್ತದೆ) ವೈನ್, ಬೀರು, ವಿಸ್ಕಿ, ರಮ್ ಮುಂತಾದವು ಹಣ್ಣು ಇಲ್ಲವೇ ಧಾನ್ಯಗಳಿಂದ ಮಾಡಿರುವುದರಿಂದ, ಅವೂ ಸಸ್ಯಾಹಾರಿ ಪಾನೀಯವೆಂದು.

ಮೊಟ್ಟೆ ಸಸ್ಯಾಹಾರವ್ರೋ, ಮಾಂಸಾಹಾರವ್ರೋ ಎಂಬುದನ್ನು ತೀರ್ಮಾನಿಸಲು, ಯಾವುದಾದರೂ International Foundation ನಿಂದ ಗ್ರಾಂಟ್ಸ್ ತೆಗೆದುಕೊಂಡು, ಒಂದು International Seminar ಅನ್ನು ಹೋಟೆಲ್‌ನಲ್ಲೆ ಮಾಡೋಣ ಎಂದು ಗುರುಗಳು ಹೇಳಿದರು.

ಸರಿ, ಹೋಟೆಲ್ ಶುರುವಾಯಿತು. ಒಳ್ಳೆಯ ಜಾಗದಲ್ಲಿದ್ದರೆ ಎಂತಹ

ಕಥವಾ ಹೋಟೆಲ್‌ಗಳಿಗೂ ಗಿರಾಕಿಗಳಿದ್ದೇ ಇರುತ್ತಾರೆ. ಇನ್ನು, ಗಾಂಪರ Boarding & Lodging ನಲ್ಲಿ ಇರುವುದಿಲ್ಲವೇ? ಸುಮಾರು ಒಂದು ವರ್ಷ ಕಾಲ ಹೋಟೆಲ್ ನಡೆಯಿತು.

(ನೀವು ಕೇಳಬಹುದು, ಗಾಂಪರು ಹೋಟೆಲ್ ಶುರುಮಾಡಿದರು. ಅದಕ್ಕೂ ನೆಗೆದು ಬೀಳುವುದಕ್ಕೂ ಏನು ಸಂಬಂಧ ಎಂದು. ಸ್ವಲ್ಪ ತಾಳ್ಮೆಯಿರಲಿ ಸ್ವಾಮಿ ಮುಂದಕ್ಕೆ ಓದಿ.)

ಒಂದು ವರ್ಷದ ನಂತರ International Seminar ಕೂಡ ನಡೆಯಿತು ಮೊಟ್ಟೆಯ ಮೇಲಲ್ಲ, ಬೊಮ್ಮನ್ ಕಿಳ್ಳೆಯ ಪೆಟ್ರೋಲ್ (ಇದೇ ಲೇಖಕನ "ಬೊಮ್ಮನ್ ಕಿಳ್ಳೆಯ ಪೆಟ್ರೋಲ್" ಎಂಬ ಲೇಖನವನ್ನು ಓದಿ.) ಮೇಲೆ. ಮಂತ್ರಿಗಳೋರ್ವರ (ಅವರೂ ಕೂಡ ಗಾಂಪ ಮಠದ ಶಿಷ್ಯರಲ್ಲೊಬ್ಬರು) ಶಿಫಾರಸ್ ಮೇಲೆ ಈ Seminar ನಮ್ಮ ಗಾಂಪರ ಹೋಟಲಿನ ಸಭಾಂಗಣದಲ್ಲೇ ನಡೆಯಿತು. ರೂಮುಗಳೂ ಕೂಡ ಅಲ್ಲೇ ಇದ್ದುದರಿಂದ Lodging ಗೆ ತೊಂದರೆ ಇರಲಿಲ್ಲ. ಎಲ್ಲಾ Scientist ಗಳೂ ಸೇರಿ, ಬೊಮ್ಮನ್ ಕಿಳ್ಳೆಯ ಪೆಟ್ರೋಲ್ International Market ನಲ್ಲಿ ಬಿಡುಗಡೆಯಾಗಬೇಕು ಎಂದು ತೀರ್ಮಾನ ಮಾಡಿದರು.

ನಮ್ಮ ಗಾಂಪರು ಮೊದಲೇ ಹೇಳಿದ್ದ ಸಸ್ಯಾಹಾರಿ ಪಾನೀಯಗಳನ್ನು Serve ಮಾಡಿದರು. ಆದರೆ, ಅಟ್ಯಾಕ್, ಅದರಲ್ಲಿ ಈಚಲು ಗಿಡದ ಕಳ್ಳೂ ಸೇರಿತ್ತು. ಈಚಲು ಗಿಡದ ಕಳ್ಳಿನಂತೆ, ಯಾವ ವಿದೇಶೀ ಪಾನೀಯಗಳೂ Kick ಕೊಡುವುದಿಲ್ಲವೆಂದು ತಿಳಿದವರ (ಬಹುಶಃ ಸ್ವಾನುಭವದಿಂದ) ಅಂಬೋಣ.

ಕಳ್ಳಿ ಕುಡಿದವರು ಕೆಲವರು ರುಚಿಹತ್ತಿ ಮತ್ತೆ ಮತ್ತೆ ಕುಡಿದರು.

Seminarಗೆ ಬಂದವರಲ್ಲಿ ಇಬ್ಬರು (Foreign Guests) ಒಂದೇ ಕೊಠಡಿಯಲ್ಲಿದ್ದರು. ಒಬ್ಬನಿಗೆ ಪೂರ್ತಿ ನಶೆಯೇರಿತ್ತು. ಇನ್ನೊಬ್ಬನಿಗೆ ಪೂರ್ತಿ ನಶೆ ಯೇರಿರಲಿಲ್ಲ. ಈ ಇನ್ನೊಬ್ಬನು ಸ್ವಲ್ಪ ಸ್ವಲ್ಪ ಕನ್ನಡ ಕಲಿತಿದ್ದ.

ಈ ಇಬ್ಬರೂ ತಮ್ಮ ಕೊಠಡಿಯನ್ನು ಸೇರಿದರು. ಸ್ವಲ್ಪ ಹೊತ್ತಿನಲ್ಲಿ, ಪೂರ್ತ ನಶೆಯೇರದಿದ್ದವನು Reception ಹತ್ತಿರ ಓಡಿಬಂದು ತೊದಲುತ್ತಾ ತೊದಲುತ್ತಾ ಹೇಳಿದ "ಡೋಮಿನಿಕ್ ನೆಗೆದು ಬಿದ್ದ"

ಇದು International Seminar ಆದ್ದರಿಂದ ಗಾಂಪರ ಗುರುಗಳೂ ಮತ್ತು 5 ಜನ ಶಿಷ್ಯರೂ Reception ಹತ್ತಿರವೇ ಇದ್ದರು. ಗುರುಗಳು ಕ್ರಾಸ್ ಚಿಹ್ನೆಯನ್ನು ಮಾಡಿಕೊಂಡು, May his soul rest in peace ಎಂದರು. ಮರುಳ ಅಚ್ಚ ಕನ್ನಡದಲ್ಲಿ ಡೊಮಿನಿಕ್ ಆತ್ಮಕ್ಕೆ ಶಾಂತಿಯನ್ನು ಕೋರಿದ.

ಗಾಂಪರು ಎಷ್ಟಾದರೂ ಗಾಂಪರಲ್ಲವೇ ಎಲ್ಲರೂ ಸೇರಿ (ತಮ್ಮ Hotel International Hotel ಎಂದು ತೋರಿಸಿಕೊಳ್ಳುವುದಕ್ಕೋಸ್ಕರ) ಎಲ್ಲವನ್ನೂ ಅದ್ದೂರಿಯಿಂದ ಮಾಡಬೇಕೆಂದು ಗುರುಗಳು ತೀರ್ಮಾನಿಸಿದರು. ಈ ಮಧ್ಯದಲ್ಲಿ ಬಂದು ವರ್ತಮಾನ ಕೊಟ್ಟ, ಅರ್ಧ ನಶೆಯೇರಿದ್ದ ಸ್ನೇಹಿತನು ಪೂರ್ತ ನಶೆಯೇರಿ ಅಲ್ಲೇ ಸೋಫಾ ಮೇಲೆ ಕುಕ್ಕರಿಸಿಕೊಂಡು ಏನೇನೋ ತೊದಲುತ್ತಿದ್ದ.

ಮರುಳ ತಕ್ಷಣ ಹೋಗಿ ಒಂದು ಸಿದ್ಧವಾಗಿದ್ದ coffin ಅನ್ನು, ಎರಡರಷ್ಟು ಬೆಲೆಗೆ ಮಾತನಾಡಿ, ಹೊರೆಸಿಕೊಂಡು ಬಂದ.

ಮಂಕ Bandset ನವರನ್ನು ಕರೆದುಕೊಂಡು ಬಂದ.

ಮಡ್ಡಿ ಹೋಗಿ fatherನ ಕರೆದುಕೊಂಡು ಬಂದ.

ಮಡೆಯ Seminarಗೆ ಬಂದವರನ್ನೆಲ್ಲಾ ಒಂದು ಕಡೆ ಸೇರಿಸಲು ಪ್ರಯತ್ನ ಮಾಡುತ್ತಿದ್ದ.

ಮುಟ್ಠಾಳ ಹೇಳಿದ, ಗುರುಗಳೇ ಒಂದು ಬಾರಿ ಕೊಠಡಿಗೆ ಹೋಗಿ ನೋಡಿಕೊಂಡು ಬರೋಣ ಎಂದು.

ಗುರುಗಳಿಗೆ ರೇಗಿತು, ಅಯ್ಯೋ ಮುಟ್ಠಾಳ, ಸುಮ್ಮನಿರು, ಇದೂ ನಮ್ಮ International Hotelನ International ಮರ್ಯಾದೆ ವಿಷಯ, ಎಲ್ಲರೂ ಒಟ್ಟಿಗೆ ಹೋಗಿ ಡೊಮಿನಿಕ್‌ನ ಆತ್ಮಕ್ಕೆ ಶಾಂತಿಯನ್ನು ಕೋರೋಣ ಎಂದರು.

ಅಷ್ಟು ಹೊತ್ತಿಗೆ ಎಲ್ಲರೂ ಸೇರಿದ್ದರು, ಗುರುಗಳನ್ನು ಮುಂದೆ ಮಾಡಿಕೊಂಡು, ಎಲ್ಲರೂ ತಲೆ ತಗ್ಗಿಸಿಕೊಂಡು ಡೊಮಿನಿಕ್‌ನ ಕೊಠಡಿಯ ಕಡೆ ಹೆಜ್ಜೆ ಹಾಕಿದರು. ಬಾಗಿಲು ತೆಗೆದು ನೋಡುತ್ತಾರೆ. ಅವನು ಮಂಚದ ಪಕ್ಕದಲ್ಲಿ ಬಿದ್ದಿದ್ದಾನೆ. ಯಾರಿಗೋ ಅವನಲ್ಲಿ ಸ್ವಲ್ಪ ಚಲನೆ ಕಂಡಂತಾಯಿತು. ತಕ್ಷಣ ಡಾಕ್ಟರನ್ನು ಕರೆಸಿದರು.

ಡಾಕ್ಟರ್ ಬರುವ ಹೊತ್ತಿಗೆ ಡೊಮಿನಿಕ್ ಎದ್ದುನಿಂತುಬಿಡೋಣವೇ; ಮರುಳ ಭೂತ, ಭೂತ ಎಂದು ಕಿರುಚಿಕೊಂಡು ಮೂರ್ಛೆಹೋದ. ಡೊಮಿನಿಕ್ what is this? what is this? ಎನ್ನುತ್ತಿದ್ದ.

ಆ ಸಮಯಕ್ಕೆ ಸರಿಯಾಗಿ, ನಶೆಯಿಂದ ಹೊರಬಂದಿದ್ದ ಸ್ನೇಹಿತನೂ ಬಂದು ಏನಿದು ಎಂದು ತನ್ನ ಕನ್ನಡದಲ್ಲಿ ಕೇಳಿದ.

ಗಾಂಪರೆಲ್ಲರ ಕೋಪ ಅವನ ಮೇಲೆ ತಿರುಗಿತು. ಎಲ್ಲರೂ ಒಟ್ಟಿಗೆ ಕೂಗಾಡಲು ಶುರು ಮಾಡಿದರು (Parliament ನಲ್ಲಿ ಮಾಡುವಂತೆ)

ಡೊಮಿನಿಕ್‌ನ ಸ್ನೇಹಿತ ಹೇಳಿದ "ನಾವಿಬ್ಬರೂ ರೂಮಿಗೆ ಬಂದೆವು, ತುಂಬಾ ಪಾನೀಯ (ಕಳ್ಳು) ಸೇವಿಸಿದ್ದ ಡೊಮಿನಿಕ್ ಆರನೇ ಸ್ವರ್ಗದಲ್ಲಿದ್ದ. ಮಂಚವನ್ನು ಹತ್ತಿ ಕುಣಿದು ಅಲ್ಲಿಂದ ಕೆಳಕ್ಕೆ ನೆಗೆದು ಬಿದ್ದ" ಇದನ್ನೇ ನಾನು ಹೇಳಿದ್ದು. ಆದರೆ Father ಏಕೆ ಬಂದಿದ್ದಾರೆ Bandset ಏಕೆ? Coffin ಏಕೆ ತರಿಸಿದ್ದೀರಿ! ಯಾರು ಸತ್ತರು? May his soul rest in peace ಎಂದ.

ಡೊಮಿನಿಕ್‌ಗೆ ಎಲ್ಲಾ ಅರ್ಥವಾಗಿ ನಕ್ಕುಬಿಟ್ಟ.

ಗಾಂಪರುಗಳಿಗೆ ನಗಬೇಕೋ, ಅಳಬೇಕೋ ಗೊತ್ತಾಗಲಿಲ್ಲ.

★★★

ಕಾಣಿಕಾ ಪರಮೇಶ್ವರರು

ಬರಿಯ ನೂರನು ಕೊಡುವೆನೆಂದರೆ
ಇರಲು ಎದುರಿಗೆ ಬಿಡರು ನಿನ್ನನು
ಹರಿದು ಎಸೆವರು ನಿನ್ನ ಫೈಲನು
ಹೊರಗೆ ಇಟ್ಟಿರೊ ಬುಟ್ಟಿ ಒಳಗಡೆ

ಕೆಳಗೆ ಕುಳಿತಿರೊ ಪ್ಯೂನು ಹಿಡಿದೂ
ಒಳಗೆ ಮಲಗಿರೊ ಬಾಸು ವರೆವಿಗು
ಅಳಿಸಿ ಬಿಡುವರು ನಿನ್ನ ನೆಲ್ಲರು
ಇಳಿಯರಿದ್ದರೆ ಜೇಬಿನೊಳಗಡೆ

- ನಾಗೂಶ್ರೀ ಸೂರಿ

ಪ್ರಸನ್ನನ ಪ್ರಸವ ವೇದನೆ

– ನಾಗೂಶ್ರೀ ಸೂರಿ

ಅವತ್ತಿನ ದಿನ ವಾಸುದೇವರಾಯರ ಮನೇನಲ್ಲಿ ಸಡಗರವೋ ಸಡಗರ. ರಾಯರ ಸೊಸೆ ಜಾನಕಿ ಚೊಚ್ಚಲು ಬಾಣಂತನಕ್ಕೆ ಅಂತ ತೌರಿಗೆ ಹೊರಡೋ ಸಂದರ್ಭ. ಅವಳ ಗಂಡ ಪ್ರಸನ್ನ ಅವಳ ಸೂಟ್‌ಕೇಸೂ ಮತ್ತೊಂದೂ ಅನ್ನೋವನ್ನೆಲ್ಲಾ ಟ್ಯಾಕ್ಸೀನಲ್ಲಿ ತುಂಬಿ ಎಲ್ಲಾ ಸರಿಯಾಗಿದ್ಯಾ ಅಂತ ಒಂದು ಕಡೇ ಸಲ ಚೆಕ್ ಮಾಡತಾ ಇದ್ದ. ಅವನ ತಮ್ಮ ಹರೀಶ ಜಾನಕೀಗೆ ಅಂತ ಮಾಡಿದ್ದ ಚಕ್ಲೀನಲ್ಲಿ ಒಂದು ಎರಡನ್ನ ಜೇಬಲ್ಲಿಟ್ಕೊಂಡು ತಿನ್ನತಾ ಇದ್ದ.

ರಾಯರ ಹೆಂಡತಿ ರುಕ್ಮಿಣಮ್ಮನವರಿಗೋ ಕಿರೀಟ ಬಂದ ಹಾಗಾಗಿತ್ತು. ಸೊಸೆಗೆ ಗ್ಯಾರಂಟೀ ಗಂಡು ಮಗೂನೇ ಆಗುತ್ತೆ, ತಮ್ಮ ಮಾವನವರಿಗೆ ಕನಕಾಭಿಷೇಕಾನ ಪಾಂಗಿತವಾಗಿ ಮಾಡ್ಸೇ ಮಾಡಿಸ್‌ತೀನ ಅನ್ನೋ ಭರವಸೆ ಅವರಿಗೆ. ಅದೇ ಮಾತನ್ನೇ ಹೋಗಿ ಬರತೇನೆ ಅಂತ ನಮಸ್ಕಾರ ಮಾಡಿದ ಸೊಸೆಗೆ ಹೇಳ್ತಾ ಇದ್ದರು:

''ಹೋಗಿ ಬಾರಮ್ಮಾ ತಾಯಿ... ಸುಖಪ್ರಸವ, ಬಾಣಂತನ, ಎಲ್ಲಾ ಮುಗಿಸ್ಕೊಂಡು ಬಾಲಮುಕುಂದನ ಹಾಗಿರೋ ಗಂಡುಕೂಸನ್ನ ಕರಕೊಂಡು ಬಂದೀ ಅಂದರೆ ನಿನ್ನ ಮಾವನವರಿಗೆ ತುಂಬಾನೇ ಆನಂದವಾಗತ್ತೆ...''

''ಅದು ಇನ್ನೂ ಐದಾರು ತಿಂಗಳ ಮಾತಾಯಿತು... ಈಗ ನಿನ್ನ ಮಾವನವರಿಗೆ ಸಮಾಧಾನ ಆಗಬೇಕೂ ಅಂತಿದ್ರೆ ನೀನು ಹೊರಡ್ತಾ ಇರಬೇಕಮ್ಮ... ಈಗಲೋ ಆಗಲೋ ಇನ್ನೇನು ರಾಹುಕಾಲ ಬಂದುಬಿಡತ್ತೆ...''

ರಾಯರು ಅವಸರ ಮಾಡ್ತಾ ಹೇಳಿದರು.

''ಆಯಿತಮ್ಮ, ಹೋಗಿ ಬಾ... ಅಂದ ಹಾಗೆ ನಿನ್ನ ಗಂಡ ಆ ಪ್ರಸನ್ನ ಈ ಹೊರಡೋ ಟೈಂನಲ್ಲಿ ಎಲ್ಲಿ ಹೋದ... ಕಾಣಿಸ್ತಾ ಇಲ್ಲವಲ್ಲ?...''

''ಅಮ್ಮಾ, ಆ ಹೆರಾಲ್ಡ್ ಪೇಪರ್ ಬಂತಲ್ಲ, ಅದನ್ನ ತಗೊಂಡು headline ನೋಡ್ಕೊಂಡು ಬಂದು ಬಿಡತೀನ ಅಂತ ಅವನ ರೂಮಿಗೆ ಹೋಗಿದ್ದಾನೆ'' ಹರೀಶ ವರದಿ ಒಪ್ಪಿಸಿದ.

''ಸರೀ ಹೋಯಿತು... ಆ headlines ನೋಡೋದಕ್ಕೆ ಅವನಿಗೆ ಈ ಟೈಂಗೇನೆ ಘಳಿಗೆ ಕೂಡಿ ಬಂತಂತೇನು... ಹೋಗಮ್ಮ, ಅವನನ್ನ ಎಬ್ಬಿಸ್ಕೊಂಡು ಎಳಕೊಂಡು ಹೋಗಮ್ಮ... ಸ್ವಲ್ಪ ಏಮಾರಿದ್ರೆ jumbles ಉ, cross-wordಉ ಅಂತ ಕೂತ್ರೂ ಕೂರೋನೇ ಪ್ರಾಣಿ...''

ಗಂಡನ್ನ ಕರೆಯೋಕ್ಕೆ ಅಂತ ಜಾನಕಿ ರೂಮಿನೊಳಕ್ಕೆ ಹೋದರೆ ಅಲ್ಲಿ ಆ ಪ್ರಸನ್ನ ಏನು ಮಾಡತಾ ಇದ್ದಾನೆ? ತಲೆ ಮೇಲೆ ಕೈ ಹೊತ್ಕೊಂಡು ಆಕಾಶದ ಕಡೆ ತಲೆ ಮಾಡಿಕೊಂಡು vacant look ಅಂತಾರಲ್ಲ, ಹಾಗೆ ಕೂತಿದ್ದಾನೆ.

''ಯಾಕೆ, ಏನಾಯ್ತು? ಯಾಕೆ ಹಾಗೆ ಕೂತಿದ್ದೀರಿ...'' ಕೊಂಚ ಗಾಬರಿಯಿಂದಲೇ ಕೇಳಿದಳು.

''ನೀನು... ನೀನು....confinementಗೆ ಹೋಗತಾ ಇದ್ದೀಯ...''

''ಅದು ಏಳು ತಿಂಗಳ ಹಿಂದಿನ ಸುದ್ದಿ... ಇಷ್ಟು ದಿನ ಇಲ್ಲದ ಭಯ ಈ eleventh hour ನಲ್ಲಿ ಯಾಕೆ ನಿಮಗೆ...?''

''ನನಗೆ ಭಯ ಆಗತಾ ಇದೆ..''

''ಅಯ್ಯೋ ರಾಮನೇ! ನರ್ಸಿಂಗ್ ಹೋಂಗೆ ಅಡ್ಮಿಟ್ ಆಗೋರು ನೀವೋ, ನಾನೋ?''

''ಅದಕ್ಕೇ ನನಗೆ ಭಯ ಆಗತಾ ಇರೋದು... ಹೆರಿಗೇ ಟೈಂನಲ್ಲಿ ಏನಾದ್ರೂ ಹೆಚ್ಚೂ ಕಡಿಮೇ ಆಂತ ಆದ್ರೆ?...''

''ಅದಕ್ಕೆ check-up ಎಲ್ಲಾ ಮಾಡಿಸಿ normal delivery-caesarian not foreseen ಅಂತ ಬಂದಿದ್ಯಲ್ಲ... ಯಾಕೆ, ಹೆಣ್ಣು ಮಗೂ ಅಂತ ಆದ್ರೆ ಏನು ಮಾಡೋದು ಅಂತ ಚಿಂತೇನಾ...?''

''ಛೆ, ಹೆಣ್ಣಾದ್ರೆ ಏನು, ಗಂಡಾದ್ರೆ ಏನೂ... ಅದಕ್ಕಲ್ಲ ನನಗೆ ಭಯ ಆಗತಾ ಇರೋದು...''

''ಮತ್ತೆ ಇನ್ಯಾತಕ್ಕೋ...?''

''ಇಲ್ಲಿ ನೋಡು... ಈ ಪೇಪರ್‌ನಲ್ಲಿ ಈವತ್ತು ಏನು ಬಂದಿದೇ ಅನ್ನೋದು ಕೊಂಚ ನೋಡು...'' ಪ್ರಸನ್ನ ತೋರಿಸಿದ್ದ ಸುದ್ದಿ ಹೀಗಿತ್ತು:

''ಬೆಂಗಳೂರಿನ ಆಸ್ಪತ್ರೆಯೊಂದರಲ್ಲಿ ಒಬ್ಬ ಮಹಿಳೆ ಒಂದೇ ಬಾರಿಗೆ ನಾಕು ಮಕ್ಕಳಿಗೆ ಜನ್ಮವಿತ್ತಿದ್ದಾರೆ... ತಾಯಿ ಮಕ್ಕಳು ಆರೋಗ್ಯದಿಂದ ಇದ್ದಾರೆ...''

ಹೀಗೊಂದು ಸಮಾರೋಪ

– ಟಿ. ಸುನೀತ

ನಮ್ಮ ಮಹಿಳಾ ಸಮಾಜದಿಂದ ಹನ್ನೆರಡು ಜನ ಸೊಂಡೂರಿನಲ್ಲಿ ನಡೆದ ಒಂದು ಅದ್ದೂರಿ ಸಮಾರಂಭಕ್ಕೆ ಭೇಟಿ ಕೊಟ್ಟಿದ್ದೆವು. ಏಕೆಂದರೆ ನಮ್ಮ ಸದಸ್ಯನಿಯರೆಲ್ಲರಿಗೂ ಸಂಗೀತವೆಂದರೆ ಪಂಚಪ್ರಾಣ ಕೇಳಲು. ಹಾಗಾಗಿ ಎಲ್ಲರೂ ಸೇರಿ ಕಛೇರಿಗೆ ಹೋಗಿ ಬರೋಣವೆಂದು ಮುಂಚೆಯೇ ತೀರ್ಮಾನಿಸಿ ಒಂದು Matador ಮಾಡಿಕೊಂಡು ಹೋಗಿದ್ದೆವು.

ನಾವೆಲ್ಲರೂ ಸೊಂಡೂರಿನಲ್ಲಿ ಆ ಸಮಾರಂಭವನ್ನು ವೀಕ್ಷಿಸಲು ಹೋದಾಗ ಅಲ್ಲಿಯ ಸಭಾಂಗಣವನ್ನು ಅಲಂಕರಿಸಿರುವುದನ್ನು ನೋಡಿ ಬಹಳ ಸಂತೋಷವಾಯಿತು. ಸುಮಾರು ನಾನೂರು ಕುರ್ಚಿಗಳು ಹಿಡಿಸುವಷ್ಟು ದೊಡ್ಡ ಹಾಲು. ಹಾಗೂ ವೇದಿಕೆಯನ್ನು ಒಳ್ಳೆಯ ಸಿಂಹಾಸನದಂತಹ ಕುರ್ಚಿಗಳಿಂದ ಅಲಂಕರಿಸಿ ಮುಂದೆ ಸಂಗೀತಗಾರರಿಗೂ ಜಾಗವನ್ನು ಬಿಟ್ಟಿದ್ದರು. ನಾವೆಲ್ಲರೂ ಹೋಗುವ ವೇಳೆಗೆ ಊರಿನ ಸಂಗೀತ ಪ್ರಿಯರೆಲ್ಲರೂ ಬಂದು ಕುರ್ಚಿಗಳಲ್ಲಿ ಆಸೀನರಾಗಿದ್ದರು. ಈ ಸಮಾರಂಭದ ಉದ್ದೇಶವೇನೆಂದರೆ ಕಛೇರಿಯ ಜೊತೆಗೆ ಒಬ್ಬ ಗಣ್ಯ ವ್ಯಕ್ತಿಯನ್ನು ಸನ್ಮಾನಿಸುವುದು.

ಒಂದು ಅರ್ಧ ಗಂಟೆಯ ನಂತರ ಕಛೇರಿ ಪ್ರಾರಂಭವಾಯಿತು. ಗಣೇಶನನ್ನು ನೆನೆಯುತ್ತಾ "ವಾತಾಪಿ ಗಣಪತಿಂ" ಶುರು ಮಾಡಿದರು. ವೇದಿಕೆಯ ಮೇಲೆ ವ್ಯಕ್ತಿಯೊಬ್ಬರು ಶ್ರದ್ಧಾಭಕ್ತಿಯಿಂದ ಪಟ್ಟೆಮಡಿ ಉಟ್ಟುಕೊಂಡು ಹಣೆಯ ತುಂಬಾ ವಿಭೂತಿಯನ್ನು ಹಚ್ಚಿಕೊಂಡು ಕಳಕಳಿಯಿಂದ ಕಛೇರಿಯನ್ನು ಕೇಳುತ್ತಾ ಕುಳಿತಿದ್ದರು. ಈ ಸಮಾರಂಭವನ್ನು ಏರ್ಪಡಿಸಿದ್ದವರಲ್ಲಿ ಒಬ್ಬರು ವೇದಿಕೆಯ ಮೇಲೆ ಕುಳಿತಿದ್ದ ಆ ವ್ಯಕ್ತಿಯನ್ನು ಉದ್ದೇಶಿಸಿ ಅವರಿಗೆ ಈ ಹಾಡು ಇಷ್ಟ, ಆ ಕೀರ್ತನೆ ಇಷ್ಟ ಅಂತ ಹೇಳಿ ಅವರಿಗೆ ಇಷ್ಟವಾದ ಎಲ್ಲಾ ಹಾಡುಗಳನ್ನು ಹಾಡಿಸಿದರು. ಹೀಗೆ ಕಛೇರಿಯು ಮುಂದುವರಿದು ಸುಮಾರು 8.30ರ ವೇಳೆಗೆ ಕಛೇರಿಯು ಮಂಗಳದೊಂದಿಗೆ ಮುಗಿಯಿತು. ಅಲ್ಲಿ ಸೇರಿದ್ದ ಎಲ್ಲಾ ಜನರು ಸಂಗೀತಗಾರರನ್ನು ಬಹಳ ಚೆನ್ನಾಗಿತ್ತು ಎಂದು ಕೈ ಕುಲುಕಿ ತಮ್ಮ

ಅಭಿನಂದನೆಯನ್ನು ಸಲ್ಲಿಸುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ನನ್ನ ಸ್ನೇಹಿತೆ ಏನೋ ಕೇಳಿಸಿದಂತಾಯಿತು ಎಂದು ಹೇಳುತ್ತಿದ್ದಳು. ಆಗ ತಿಳಿಯಿತು ಏನೆಂದರೆ ಈ ಸಮಾರಂಭವನ್ನು ಏರ್ಪಡಿಸಿದ್ದವರನ್ನು ಹತ್ತಿರ ಕರೆದು ಸಂಗೀತಗಾರರೊಬ್ಬರು ಕೇಳಿದರು ನಾವು ಆ ವೇದಿಕೆಯ ಮೇಲೆ ಕುಳಿತಂಥ ವ್ಯಕ್ತಿಗೆ ಇಷ್ಟವಾದ ಹಾಡುಗಳನ್ನು ಹಾಡಿದೆವು. ಆದರೆ ಆತ ಒಂದು ಬಾರಿಯಾದರೂ ತಲೆ ಅಲ್ಲಾಡಿಸಲಿಲ್ಲ ಏಕೆ? ಮುಖದಲ್ಲೂ ಸಹ ಭಾವನೆ ವ್ಯಕ್ತವಾಗಲಿಲ್ಲ ಏಕೆ? ಎಂದು ಕೇಳಿದರಂತೆ. ಅದಕ್ಕೆ ಅವನು ''ಆ ವ್ಯಕ್ತಿ ತಲೆಯಾಡಿಸುವುದಕ್ಕೆ ಅವರಿಗೆ ಜೀವ ಇದ್ದರೆ ತಾನೆ ಆಡಿಸುವುದು'' ಅಂದರಂತೆ.

ಅವರ ಮನೆಯಲ್ಲಿ ಸತ್ತ ಆ ಗಣ್ಯವ್ಯಕ್ತಿಯೊಡನೆ ಕಡೇ ಊಟಕ್ಕೆ ಮುಂಚೆ ಸಂಗೀತವನ್ನು ಏರ್ಪಾಡು ಮಾಡಿದ್ದರಂತೆ.

★★★

ಮಿನಿ - ಹನಿ

ಸೋಂಭೇರಿತನಕ್ಕೆ ಒಂದು ಸ್ಪರ್ಧೆ ಏರ್ಪಡಿಸಿದ್ದರಂತೆ ಅತೀ ಹೆಚ್ಚು ಸೋಂಭೇರಿತನವನ್ನು ಪ್ರದರ್ಶಿಸಿದವರಿಗೆ ಕ್ರಮವಾಗಿ ಮೊದಲನೆಯ, ಎರಡನೆಯ ಹಾಗೂ ಮೂರನೆಯ ಬಹುಮಾನ ಇಟ್ಟಿದ್ದರು.

ಸ್ಪರ್ಧೆ ನಡೆಯಿತು. ನೂರು ಜನರು ಭಾಗವಹಿಸಿದ ಸ್ಪರ್ಧೆಯಲ್ಲಿ ವಿಜೇತರನ್ನು ಆರಿಸಲಾಯಿತು. ಅಂದೇ ಸಮಾರೋಪ, ಮೊದಲನೆಯ ಬಹುಮಾನಿತರನ್ನು ಕೂಗಿದರು ಆತ ಬಂದು ಬಹುಮಾನ ತಗೊಂಡು ಹೋದ. ಎರಡನೇ ಬಹುಮಾನ ಬಂದವನನ್ನ ಕೂಗಿದರು. ಆತನೂ ಬಂದು ಬಹುಮಾನ ತಗೊಂಡು ಹೋದ. ಮೂರನೆಯ ಬಹುಮಾನ ಬಂದೋನನ್ನು ಕೂಗಿದರು. ಅವನು ಕೂತಲ್ಲಿಂದಲೇ ಗೊಣಗಿದ ''ಅಯ್ಯೋ ಅದನ್ನ ಅಲ್ಲಿಟ್ಟಿರ್ರಿ... ಹೋಗುವಾಗ ತಗೊಂಡ್ ಹೋಗ್ತೀನಿ. ಅದಕ್ಕೋಸ್ಕರ ಯಾರು ಎದ್ ಬರ್ತಾರೆ'' ಅವನಿಗೇ ಮೊದಲ ಬಹುಮಾನ ಘೋಷಿಸಿದರು.

- ನಕ್ಷತ್ರಿಕ

ತಾತ ಹೇಳಿದ ಪಾತುಕತೆ

- ಎಂ.ಎಸ್.ಎಸ್. ಮೂರ್ತಿ

ನಾನು ಈಗ ನಿಮಗೊಂದು ಸತ್ಯಕತೆ ಹೇಳ ಹೊರಟಿದ್ದೀನಿ. ಸತ್ಯಕತೆ ಅಂದರೆ ಅಪ್ಪಟ ಸತ್ಯಕತೆ. ಸುಳ್ಳು, ಪೊಳ್ಳು ಏನೂ ಸೇರಿಸಿಲ್ಲ. ಸುಳ್ಳು ಸೇರಿಸಿ ಕತೆ ಹೇಳೂದೂ ಒಂದು ಕತೇನೇ? - ಎಲ್ಲಾರೂ ಮಾಡ್ತಾರೆ. ಆದರೆ ನಡೆದದ್ದು ನಡೆದ ಹಾಗೇ ಹೇಳೂದು ಇದೆ ನೋಡಿ, ಅದೊಂದು ಉತ್ತಮ ಕಲೆ. ಈ ಕತೇನೂ ನಿಜವಾಗಿ ನಡೆದಿದ್ದೇ. ಇಲ್ಲದೇ ಇದ್ದರೆ ನಮ್ಮ ತಾತ ಹೇಳ್ತಿದ್ದರೆ? ಅದರಲ್ಲಿ ಊಹೆ, ಪೂಹೆ ರವಷ್ಟೂ ಇಲ್ಲ, ಎಲ್ಲಾ ಹೇಗೆ ನಡೀತೊ ಹಾಗೇ ತಾತ ನಂಗೆ ಹೇಳಿದ್ರು. ಈಗ ನಾನೂ ಹಾಗೇ ಹೇಳ್ತೀನಿ ಇದು ಯಾವುದೂ ಪುರಾತನ ಕಾಲದ ಕತೇನೂ ಅಲ್ಲ, ರಾಮಾಯಣದ್ದೂ, ಮಹಾಭಾರತದ್ದೂ ಅಥವಾ ಪಂಚತಂತ್ರದ್ದೂ ಒಂದು ಎಳೆ ತೆಗೆದು ಅದಕ್ಕೆ ಬಣ್ಣ ಹಚ್ಚಿ, ತಿರುಗಿಸಿ, ತಿರುಗಿಸಿ ಕತೆ ಅಂತ ಹೇಳೂದು ಏನು ಮಹಾ!... ಹೇಳ್ತೀನಿ, ಹೇಳ್ತೀನಿ, ತಾತ ಹೇಳಿದ್ದ ಪಾತು ಕತೆ ಹೇಳಕ್ಕೇ ಹೊರಟಿದ್ದು. ಸ್ವಲ್ಪ ತಾಳ್ಮೆ ಇರಲಿ, ತಾಳಿದವ ಬಾಳಿಯಾನು ಅಂತ ನೀವು ಕೇಳಿಲ್ಲವೆ? ತಾಳಿದವ ಕತೆ ಕೇಳಿಯಾನು ಅಂತಾನೂ ಸೇರಿಸಿಕೊಳ್ಳಿ ಬೇಕಾದರೆ. ಹಾ! ಏನ್ಹೇಳ್ತಿದ್ದೆ. ತಾತ ಹೇಳಿದ ಪಾತುಕತೆ ಅಲ್ಲವೇ. ಅದಂತೂ ಈಚಿನ ಕತೆಯೇ - ಅಂದರೆ ಶತಮಾನಕ್ಕೂ ಕಡಿಮೇನೆ ಅನ್ನಬಹುದೇನೊ. ಆಗ ನಮ್ಮಜ್ಜ ಚಡ್ಡಿ ಹಾಕ್ಕೊಂಡು ಓಡಾಡ್ತಾ ಇದ್ರು - ಅಂದರೆ ಅದನ್ನ ಯಾವಾಗ ತ್ಯಜಿಸಿಬಿಟ್ಟರು ಅಂತ ಕೇಳಬೇಡಿ. ಬೆಳದ್ ಬೆಳದ್ಹಂಗೆ ಅದನ್ನ ಒಳಕ್ಕೆ ಸೇರಿಸ್ಬಿಟ್ಟರು ಅಷ್ಟೆ! ಅವರ ಬಾಲ್ಯದಲ್ಲಿ ನಿಜವಾಗಲೂ ನಡೆದ ಕತೇನೇ, ನಡೆದಿದ್ದಾದರೂ ಎಲ್ಲಿ ಅಂತೀರ? ಇಲ್ಲೇ, ನಮ್ಮ ಬೆಂಗಳೂರಿನ ಹತ್ತಿರದಲ್ಲೇ ಸುಮಾರು 300 ಕಿ.ಮೀ. ದೂರದ ಊರು. ಈಗಿಲ್ಲ ಅದು ಬಿಡಿ. ಏನಾಯ್ತು ಅಂತೀರಾ. ಕಾಲ ಮುಂದುವರಿದಂತೆಲ್ಲಾ ತಿನ್ನೊ ಬಾಯಿಗಳೂ ಜಾಸ್ತಿ ಆಗ್ತಾ ಬಂತಲ್ಲಾ, ಅದಕ್ಕೆಲ್ಲಾ ಹೆಚ್ಚು ಹೆಚ್ಚು ಬೆಳೆ ತೆಗೀಬೇಕಾಗ್ತಾ ಬಂತು. ಮಳೇ ನೀರನ್ನೇ ನಂಬಿದ್ದರೆ ಅದು ಆಗ್ತಾ ಇರಲಿಲ್ಲ, ಇನ್ನೂ ಗ್ಯಾರಂಟಿ ನೀರು ಬೇಕಲ್ಲ. ಯಾರೋ ವಿಶ್ವಕರ್ಮ ಬಂದು ನಮ್ಮೂರ ಹತ್ತಿರ ಹರೀತಿದ್ದ ಒಣಕಲು ನದಿ ಮೇಲೆ ಕಣ್ಣು ಹಾಕಿದ. ಅದಕ್ಕೆ ಕಟ್ಟೆ ಅಡ್ಡ ಹಾಕಿ, ನೀರು ನಿಲ್ಲಿಸೇಬಿಟ್ಟರು. ಆ ನಮ್ಮೂರು, ಅಲ್ಲಿ ತಮ್ಮ

ತಾತನೂರು ಜಲಸಮಾಧಿಯಾಗೇ ಹೋಯ್ತು. ಇದನ್ನೆಲ್ಲಾ ಯಾಕೆ ಹೇಳಕ್ಬಂದೇ ಅಂದ್ರೇ - ಈಗ ನಾನು ಹೇಳ್ತಾ ಇರೂದು ಸತ್ಯಕತೆ ಇದರಲ್ಲಿ ಸುಳ್ಳು, ಪೊಳ್ಳು ಇಲ್ಲ ಅಂತ ಸಾಬೀತು ಮಾಡುಕ್ಕೆ. ಅದುಬಿಡಿ. ನೀವಂತೂ ನಾನು ಹೇಳಿದ್ದನ್ನೆಲ್ಲಾ ನಂಬೇಬಿಡ್ತೀರ. ಇನ್ನು ಸಾಬೀತು ಮಾಡುವ ಅವಶ್ಯಕತೆ ತಾನೆ ಎಲ್ಲಿ.

ತಾತನ ಮನೆ ಒಂದು ತರಹ ಕಲ್ಯಾಣ ಮಂಟಪದ ಹಾಗೆ, ಏನಿಲ್ಲಾ ಅಂದರೂ 35 ಜನ ಮನೇಲಿ, ತಾತಾನೇ ಚಿಕ್ಕವರು. ಅದರಲ್ಲಿ ಹತ್ತಾರು ಬ್ರಹ್ಮಚಾರಿಗಳು (ವಟುಗಳು ಅನ್ನಿ), ಮುತ್ತೈದೆಯರು, ಗೃಹಸ್ಥರು, ವಿದುರರು, ವಿಧವೆಯರು ಎಲ್ಲಾ ಒಂದೇ ಸೂರಿನ ಕೆಳಗೆ. ಇಷ್ಟೊಂದು ಜನ ಇದ್ದಾಗ ದಿವಸಾ ಒಂದೊಂದು ವಿಶೇಷ ಇದ್ದೇ ಇರುತ್ತಲ್ಲ. ಇವತ್ತು ನಾಮಕರಣ, ನಾಳೆ ಚವಲ, ಮದುವೆ, ಶಾದ್ರ, ಹೆಣ್ಣು ಮಕ್ಕಳು ದೊಡ್ಡವರಾಗೋದು (ಈಗಿನವರಿಗೆ ಹಾಗಂದ್ರೆ ಏನು ಅಂತ ಗೊತ್ತಿಲ್ವೇನೊ - ಅವರು ''ದೊಡ್ಡೋರೇ'' ಆಗಲ್ವಲ್ಲ!) ಹೀಗೆ ಒಂದೇ, ಎರಡೇ. ಮನೇಲಿರೋ ಚಿಂಟೂಗಳಿಗಂತೂ ಖುಷಿಯೋ ಖುಷಿ, ಅಂತಹ ದಿನಗಳಲ್ಲಿ, ಶಾಲೆಗೆ ಹೋಗಿ, ಬೆರಳಮೇಲೆ ಏಟುತಿಂದು, ಬೆಂಚಮೇಲೆ ನಿಲ್ಲೋದು ತಪ್ಪಿತು. (ಅಂದ್ಹಾಗೆ ತಾತನ ಸ್ಕೂಲಿನಲ್ಲಿ ಹದಿನಾರು ಮಕ್ಕಳಿಗೆ ಒಂದೇ ಒಂದು ಬೆಂಚಿತ್ತಂತೆ. ಅದಕ್ಕೇ ಅವರೆಲ್ಲಾ ನೆಲದ ಮೇಲೆ ಪಕಡದಸ್ತಾಗಿ ಕೂತು ಬಿಡ್‌ತಿದ್ರು. ನಿಂತುಕೊಳ್ಳಕ್ಕೆ ಮಾತ್ರ ಬೆಂಚು!) ಅವತ್ತಿನ ದಿವಸ ಅವೆಲ್ಲಾ ತಪ್ತಿತ್ತು. ಅದಕ್ಕೆ ಬದಲು ಮನೇಲೇ ಬಿಸಿಬಿಸಿಯಾಗಿ ನಿಜವಾದ ಕಜ್ಜಾಯ - ಅದೇ ನಿಜವಾದ ಕತೆ ತಾನೆ ಹೇಳಕ್ಕೆ ಬಂದಿದ್ದು. ಕಜ್ಜಾಯಾನು ನಿಜವಾದ್ದೇ ಇರಬೇಕಲ್ಲ. ಅದುಬಿಟ್ಟು ಯಾವುದೊ ಕಾಗೇ ಕಚ್ಚಿಕೊಂಡು ಹೋದ ಕಜ್ಜಾಯ - ನರೀಗೆ ಆಸೆಯಾಯಿತು - ನೀನೇ ಚೆನ್ನಾಗಿ ಹಾಡ್ತೀಯ ಅಂತ ಕಾಗೆಗೆ ಹೇಳ್ತು - ಅಂತೆಲ್ಲಾ ಹೆಣೆದು ಹೇಳೋಕೆ ಇದೇನು ಸುಳ್ಳು, ಪೊಳ್ಳು ಕತೆ ಅಲ್ಲವಲ್ಲ. ತಾತ ಹೇಳಿದ ಪಾತುಕತೆ ನಿಜವಾಗಿ ನಡೆದ ಕತೇನೆ - ಅದೇ, ಹೇಳ್ತಿದ್ದೀನಲ್ಲ, ಕೇಳಿಸ್ಕೊಳಿ. ಯಾವ ಪ್ರೋಗ್ರಾಂಗಾಗಲೀ, ವಟುಗಳನ್ನು ಹುಡುಕಿಕೊಂಡು ಹೋಗುವುದಾಗಲೀ, ಋಷಿಪಂಚಮಿಗೆ ಮುತ್ತೈದೆಯರನ್ನು ಹುಡುಕಿಕೊಂಡು ಹೋಗುವುದಾಗಲೀ, ಶಾದ್ರಕ್ಕೆ ಬ್ರಾಹ್ಮಣರನ್ನು ಹುಡುಕುವುದಾಗಲೀ ಯಾವುದೂ ಬೇಕಾಗ್ತಾನೇ ಇರಲಿಲ್ಲ. ಎಲ್ಲಾ ಮನೇಲೇ Readly available. ಮೊದಲು ಟೆಲಿಫೋನ್ ಮಾಡಿ, ಅಪಾಯಿಂಟ್‌ಮೆಂಟ್ ತಗೊಂಡು, ಆಮೇಲೆ ಖುದ್ದಾಗಿ ಹೋಗಿ fixup ಮಾಡಿಕೊಳ್ಳೋದು ಇದು ಯಾವ ತಕರಾರೂ ಇರಲೇ ಇಲ್ಲ. ಅಷ್ಟೇ ಅಲ್ಲ,

ಅವರು ಬಂದ ಮೇಲೆ Auto charge ಕೊಡಬೇಕೇ ಬೇಡವೆ? ಕೊಡ್ಲೇಬೇಕಾದರೆ ಎಷ್ಟು ಕೊಡಬೇಕು. ಹೋದ ವರ್ಷ ಎಷ್ಟು ಕೊಟ್ಟಿತ್ತು. ಈ ವರ್ಷ Petrol ಬೆಲೆ ಜಾಸ್ತಿಯಾಗಿದೆ! ಈ ಲೆಕ್ಕಾಚಾರಗಳ ಕಾಟವೂ ಇಲ್ಲ.

ಹಾ! ಹಾ! ಮನೇಲಿ ತುಂಬಾ ಚಿಂಟೂಗಳೂ ಇದ್ದರು ಅಂದೆನಲ್ಲಾ, ಅವರಲ್ಲಿ ಪಾತೂನೂ ಒಬ್ಬಳು. ತಾತನಿಗಿಂತಾ ನಾಲ್ಕು ವರ್ಷ ಹಿರಿಯಳು. ಪಾತೂದು ಏನು ವಿಶೇಷ ಅಂತ ಕೇಳ್ತೀರಾ? ವಿಶೇಷ ಇದೆ. ಅದಕ್ಕೆ ತಾತ ಪಾತುಕತೆ ಹೇಳಿದ್ದು. ಅವಳಮ್ಮ ತಾತನ ಅಕ್ಕ, ಪಾತೂನ ಹೆತ್ತ ಮೇಲೆ ಅಷ್ಟೇ ಸಾಕಾಯ್ತು ಅಂತ ಮೇಲಕ್ಕೆ ಪ್ರಯಾಣ ಮಾಡೇಬಿಟ್ಲಂತೆ. ಇನ್ನು ಪಾತು ತಂದೆ, ಅಯ್ಯೋಪಾಪ! ದುಃಖ ತಡೆಯಲಾರದೆ ಇನ್ನೊಂದು ಮದುವೆ ಮಾಡ್ಕೊಂಡು ಬೇರೊಂದು ಕಡೆ ಬೇರು ಬಿಟ್ಟರಂತೆ. ಪಾತು ಅನಾಥಳಾದಳಲ್ಲ. ಅದಕ್ಕೆ ಕುಟುಂಬದವರಿಗೆಲ್ಲಾ ಅವಳನ್ನು ಕಂಡರೆ ಅನುಕಂಪ. ಬರೀ ಅನುಕಂಪ ಅಷ್ಟೇ ಅಲ್ಲ ಪ್ರೀತಿ ಕೂಡ. ಆದರೆ ನಮ್ಮ ತಾತನ ವಿಷಯ ಹಾಗಲ್ಲ. ಅವರ ಅಪ್ಪ ಅಮ್ಮಂಗೆ, ತಾತಾನೇ ಮೊದಲನೇ issue. ಅಯ್ಯೋ? ಪಾತು ಕತೆ ಹೇಳುವಾಗ ತಾತನ ಕತೆ ಯಾಕೆ ಅಂತ ಕೇಳ್ತೀರಲ್ಲ. ತಾತ ಹೇಳಿದ ಪಾತು ಕತೆ ಹೇಳೂವಾಗ ತಾತನ ಕತೆ ಬರ್ದೇ ಇರುತ್ಯೆ? ಮಹಾಭಾರತ ಹಾಡೂವಾಗ ಭಾಗವತ ಬೇಡ ಅಂದರೆ ಹೇಗೆ? ಅಷ್ಟೇ ಯಾಕೆ ಈಗಿನ ಕಾಲದ್ದೇ ಉದಾಹರಣೆಗೆ ತೊಗೊಳ್ಳಿ, ಭರತಖಂಡದ 20ನೇ ಶತಮಾನದ ಚರಿತ್ರೆಯನ್ನು ಹೇಳು ಅಂತ ನಿಮ್ಮ ಮಗನೋ, ಮೊಮ್ಮಗಳೋ ಕೇಳಿದರೆ ನೀವು ಅದನ್ನ ಹೇಳುವಾಗ ಗಾಂಧಿ ಚರಿತ್ರೆ ಬಿಡಕ್ಕಾಗುತ್ಯೆ. ತಾತನ ಅಪ್ಪ, ಅಮ್ಮ ಪಾತು ತಂದೆ, ತಾಯಿ ಬಗ್ಗೆ ತಲೆ ಬಿಸಿ ಮಾಡಿಕೊಳ್ಳಲಿಲ್ಲ, ಕೈ ಕೈ ಹಿಡಿದು, ಜೀವನದ ಲಂಬ ರಸ್ತೆಯ ಮೇಲೆ, miles to go ಅಂತ ದಾಪುಗಾಲು ಹಾಕುತ್ತಾ ಹೊರಟೇಬಿಟ್ಟರು - ಮುಂದೆ ಎಷ್ಟೋ ಮೈಲಿಗಲ್ಲುಗಳನ್ನು ನಿಲ್ಲಿಸಿದರು ಅನ್ನಿ - ಅದೇ ಬೇರೆ ಕತೆ. ಈಗ ಬೇಡ. ನಮ್ಮ ತಾತ ಹೇಳಿದ ಪಾತುಕತೆ ಮಾತ್ರ ಹೇಳ್ತೀನಿ.

ಅದೇ ಹೇಳಿದೆನಲ್ಲ ಪಾತು, ನಮ್ಮ ತಾತನಿಗಿಂತಾ ನಾಲ್ಕು ವರ್ಷ ದೊಡ್ಡ ಪೋರಿ ಅಂತ. ಪೋರಿ, ಪೋರಿಯಾಗಿಯೇ ಉಳೀತಾಳೆಯೇ? ಹಾಗೆ ಉಳಿದಿದ್ದರೆ ಜನಸಂಖ್ಯೆ ಸಮಸ್ಯೇನೇ ಬರ್ತಿರಲಿಲ್ಲ. ನಾನು ನಿಮ್ಮನ್ನ ಕೂರುಸ್ಕೊಂಡು ಪಾತು ಕತೇನೂ ಹೇಳ್ತಾ ಇರಲಿಲ್ಲ. ನೀವು Heatಗೆ ಬಂದ ಕಡಸಿನಂತೆ restless ಆಗ್ತಾನೂ ಇರಲಿಲ್ಲ. ಪೋರಿ ಪಾತು ನೀರಿಗೆ ಹೋದರೆ ಕೇರಿಯ ಹೋರಿಗಳ

ಕಣ್ಣು ಗುಡ್ಡೆಗಳು ಭರಭರ ಅಂತ ಸುತ್ತಿ ನೆತ್ತಿಯಲ್ಲಿ ಸಿಕ್ಕಾಕ್ಕೊತ್ತಿತ್ತಂತೆ, ಪ್ರಕೃತಿ ನಿಯಮ ಅನ್ನಿ. ಅಂತಹ ಪಾತು ಒಂದು ದಿನ ''ದೊಡ್ಡವಳಾದಳು'' ಈಗಿನ ಹಾಗೆ ಅದು Wisper ಕಾಲವಲ್ಲ. TV ಯಲ್ಲಿ ಮಾಹಿತಿ ಸಿಕ್ತಾ ಇರಲಿಲ್ಲ. TVನೇ ಇರಲಿಲ್ಲವಲ್ಲಾ. ಆದರೆ ಮನೇಲಿ ಎಲ್ಲರಿಗೂ ಖುಷಿಯೋ ಖುಷಿ. ಪಾತು ಅಮ್ಮ ಬಿಟ್ಟು ಹೋದ ರೆಂಬೆ ಕವಲೊಡೆಯುವ ಕಾಲ ಬಂತು ಅಂತ. ನಮ್ಮ ತಾತನ ಅಜ್ಜಿ ಅದ್ದೂರಿಯಾಗಿ celebrate ಮಾಡಿದರಂತೆ. ಕುಟುಂಬದ ಹೆಣ್ಣು ಮಕ್ಕಳನ್ನೇ ಅಲ್ಲ, ಪಕ್ಕದ ಮನೆಯವರನ್ನೂ ಕರೆದು, ಕೈತುಂಬಾ, ಬಾಯಿತುಂಬಾ ಚಿಗಳಿ ಉಂಡೆ ತುರುಕಿದರಂತೆ. ನಮ್ಮ ತಾತ ಇದನ್ನೆಲ್ಲಾ ನೋಡ್ತಾ ಬಾಯಲ್ಲಿ ನೀರುಬಿಡ್ತಾ ಇದ್ದರಂತೆ. ಗಂಡು ಮಕ್ಕಳಿಗೆ ಆ ದಿನ ಚಿಗಳಿ ನಿಷೇಧ. ಆದರೆ ಆಸೆ ಕೇಳಬೇಕಲ್ಲ. ರಾತ್ರಿ ಎಲ್ಲರೂ ನಿದ್ರಾವಸ್ಥೆಯಲ್ಲಿದ್ದಾಗ, ತಾತ ಸದ್ದುಮಾಡದೇ ಎದ್ದು, ಅಡುಗೆ ಮನೆಗೆ ಮುತ್ತಿಗೆ ಹಾಕಿದರಂತೆ! ಚಿಗಳಿ ಉಂಡೆಯ ಒಂದು ಡಬ್ಬ ಖಾಲಿ! ಅದರ ಫಲಿತಾಂಶ ಬೆಳಿಗ್ಗೆ ದಾರಾಕಾರಾಗಿ ಕಂಡಿತಂತೆ. ಎದ್ದೊಡನೇ ತಾತ ಬಯಲಿಗೆ ಓಡಿದರು. ಹೋಗಿ ಬರುವುದರೊಳಗೆ ಮತ್ತೊಮ್ಮೆ. ಹಾಗೆಯೇ ದಿನವೆಲ್ಲಾ ಅದೆಷ್ಟು ಬಾರಿ ಆಯಿತೋ, ಅವರಿಗಂತೂ ಎಣಿಸೂ ಅಷ್ಟು ಶಕ್ತಿಯಿರಲಿಲ್ಲ. ಹುಡುಗ ಸೊರಗಿ ಹೋಗಿದ್ದ. ಯಾಕೆ ಹೀಗೆ ಅಂತ ಯಾರಿಗೂ ಗೊತ್ತಾಗಲಿಲ್ಲ. ನಾಟಿ ವೈದ್ಯರು ಬಂದು, ನಾಡಿ ಹಿಡಿದು ನೋಡಿ, ಬಿರಡೆ ಭದ್ರಮಾಡಿ ಹೋದರಂತೆ!

ತಾತ ಹೇಳಿದ ಪಾತುಕತೆ ನಿಜವಾಗಿ ನಡೆದಿದ್ದೇ, ಯಾಕೆ ಅಂತೀರಾ? ತಾತಂಗೆ ಕೊನೆತನಕ ಚಿಗಳಿ ಆಸೆ ಹೋಗಲೇ ಇಲ್ಲ. ಈಗ ನೋಡಿ, ಬೆಂಗಳೂರಿನಲ್ಲಿ ನನ್ನ ಸಂಸಾರ, ನಾನು, ನನ್ನ ಹೆಂಡ್ತಿ, ಜೊತೆಗೆ ಮಗಳು ರಮ್ಯ. ತಾತ, ಅಜ್ಜೀನೂ ನಮ್ಮ ಜೊತೆಗೆ ಬೆಂಗಳೂರಿಗೇ ಬಂದಿದ್ದರು. ಹೋದ ವರ್ಷ ನನ್ನ ಮಗಳು Wisper Club ಸೇರಿದಳು... ಕೇಳುತ್ತಿದ್ದವರಿಗೆ ಸಹನೆ ತಪ್ಪಿತು. ''ಈಗಿನ ಕಾಲದಲ್ಲಿ ಎಲ್ಲಾ ಹೆಣ್ಣುಮಕ್ಕಳೂ wisper clubಓ, Freedom clubಓ ಸೇರೇ ಸೇರ್ತಾರೆ. ಅದರಲ್ಲೇನು ಹೆಚ್ಚುಗಾರಿಕೆ. ಪಾತುಕತೆ ಹೇಳ್ತೀನಿ ಅಂತ ನಿಮ್ಮ ಮಗಳ ಕತೆ ಶುರು ಮಾಡಿದ್ರಲ್ಲ'' ಅಂತ ದಬಾಯಿಸಿದರು. ಹೇಳ್ತೀನಪ್ಪಾ, ಹೇಳ್ತೀನಿ. ಇದು ನಿಜವಾದ ಕತೆ ಅಂತ ನಿಮಗೆ ಸಾಬೀತು ಮಾಡಿ ಬಿಡ್ತೀನಿ. ಅದೇ, ನನ್ನ ಮಗಳು wisper club ಸೇರಿದಳು ಅಂದೆನಲ್ಲಾ. ಪದ್ಧತಿ ಬಿಡಬಾರದು ಅಂತ, ಅಜ್ಜಿ ಮಾತ್ರ, ಒಂದು small scale ನಲ್ಲಿ ಚಿಗಳಿ ಉಂಡೆ

ಮಾಡಿ, ನಮ್ಮ ಬೀದಿಯ ಜೀನ್‌ಧಾರಿ ಪೋರಿಯರನ್ನೆಲ್ಲಾ ಕರೆದು, ರಮ್ಯನಿಗೆ ಆರತಿ ಎತ್ತಿಯೇಬಿಟ್ಟರು. ಮುಂದಿನ ದಿನ ಮಗಳು ಸ್ಕೂಲ್‌ಗೆ ಹೋದಳು. ನಾನೂ, ನನ್ನ ಹೆಂಡ್ತಿ ಕೆಲಸಕ್ಕೆ ಹೋದೆವು. ಅಜ್ಜಿ ದೇವರ ಮನೆ ಸೇರಿದರು. ಅಜ್ಜಾನೂ ಬೇಗ ಬೇಗ ಎರಡು ಆಚಮನ ಮುಗಿಸಿ, ಅಡಿಗೆ ಮನೆಗೆ ಧಾವಿಸಿದರು. old desires die hard. ಅಜ್ಜನಿಗೆ ವಯಸ್ಸಾಗಿತ್ತು, ಆಸೆಗಲ್ಲ. ನಾಲ್ಕೇ ನಾಲ್ಕು ಚಿಗಳಿ ಉಂಡೆ ಮುಗಿಸಿದರು. ಆದರೆ ದೇಹ ತಡೆಯಬೇಕಲ್ಲ. Emergency ಆಗಿ Nursing Home ಸೇರಿಸಿವು. ಏನೇನೋ complication ಆಯ್ತು. ಮೂರೇ ದಿವಸದಲ್ಲಿ ತಾತ್ ಮುಗಿದೇ ಹೋದರು. ಇದನ್ನೆಲ್ಲಾ ಯಾತಕ್ಕೆ ಹೇಳಕ್ಕೆ ಬಂದೆ ಅಂದರೆ ತಾತ ಹೇಳಿದ ಪಾತುಕತೆ ನಿಜವಾಗಿ ನಡೆದದ್ದು ಅಂತ ನಿಮಗೆ ಗೊತ್ತಾಗಲಿ ಅಂತ. ಸಾಯೊಕ್ಕೆ ಹಿಂದಿನ ದಿನ ತಾತಾನೇ ನನ್ನನ್ನು ಹತ್ತಿರ ಕರೆದು, ಕೂರಿಸಿಕೊಂಡು ಪಾತು ಕತೆ ಎಲ್ಲಾ ಹೇಳಿದರು.

ಈ ವೇಳೆಗೆ ನನ್ನ ತಾತನ ನೆನಪಾಗಿ ದುಃಖ ಉಕ್ಕಿಬಂತು. ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅತ್ತೆ. ಸ್ವಲ್ಪ ಸಮಾಧಾನವಾಯಿತು. ಆಮೇಲೆ ತಾತ ಹೇಳಿದ ಪಾತುಕತೆ ಹೇಳೋಣ ಅಂತ ತಲೆ ಎತ್ತಿ ನೋಡಿದೆ. ಆದರೆ ಯಾರೂ ಇರಲೇ ಇಲ್ಲ. ಎಲ್ಲಾ ಹೊರಟೇ ಹೋಗಿದ್ದರು.

★★★

ನಾರಿಗೆ

ಪುಣ್ಯಕೋಟಿ ಕೇಳಿತು
ನೀನಾರಿಗಾದೆಯೋ
ಎಲೆ ಮಾನವ
ಕಿರುನಗೆ ನಕ್ಕ
ಮಾನವನೆಂದ
ಹೌದು ನಾ
ನಾರಿಗಾದೆ

ಶಾಯಿ ಕುಡಿ(ಕೆ)

– ಕೃಷ್ಣ ಸುಬ್ಬರಾವ್

ಬರೆಹಗಾರನಿಗೂ ಕುಡಿತಕ್ಕೂ ಬಿಡಿಸಲಾಗದ ಕಗ್ಗಂಟಿದೆ. ಅದರ ಬಗ್ಗೆ ಎಲ್ಲರಿಗೂ ಮಾತಿದೆ. ಆದರೆ ಓದುಗನಿಗೂ ಕುಡಿತಕ್ಕೂ ಹೆಚ್ಚಿನ ಸಂಬಂಧ ಇರುವುದು ಇತ್ತೀಚೆಗೆ ಬೆಳಕಿಗೆ ಬಂದಿದೆ. ಮೊನ್ನೆ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕೆಲವು ಅತಿ ಮುಖ್ಯವಾದ ಕ್ಲೂಗಳು ಸಿಕ್ಕವು. ದಾಖಲೆಗಳ ಬಗ್ಗೆ ಆಗಾಗ್ಗೆ ತಲೆ ಕೆಡಿಸಿಕೊಳ್ಳುವ ನನಗೆ ಪತ್ರಕರ್ತರು ಸಹಾಯ ಮಾಡುತ್ತಲೇ ಬಂದಿದ್ದಾರೆ. ಬಾಗಲಕೋಟೆಯಲ್ಲಿ ಕೋಟಿ ರೂಪಾಯಿನಷ್ಟು ಸಾಹಿತ್ಯ ಬಿಕರಿಯಾಯಿತಂತೆ. ಅದಕ್ಕೆ ಸ್ಫೂರ್ತಿ ಏನು ಗೊತ್ತೆ? ಸಮ್ಮೇಳನದಲ್ಲಿದ್ದ ವಾತಾವರಣವಲ್ಲ, ಪ್ರಭಾವಿ ಸಾಹಿತಿಗಳಲ್ಲ, ಸಾಹಿತಿ - ರಾಜಕಾರಣಿಗಳಲ್ಲ. ಸಾಹಿತ್ಯಾಸಕ್ತ ಓದುಗರು. ಅವರು ಮತ್ತೊಂದು ದಾಖಲೆಗೆ ಕಾರಣಗಳಾಗಿದ್ದಾರೆ. ಸಾಹಿತ್ಯ ಸಮ್ಮೇಳನದಲ್ಲಿ 3 ಕೋಟಿ ರೂಪಾಯಿ ಮದ್ಯ ಮಾರಾಟವಾಗಿದೆ. ವೈಎನ್ಕೆ ಇದ್ದಿದ್ದರೆ ಹೇಗೆ ಪ್ರತಿಕ್ರಿಯಿಸುತ್ತಿದ್ದರೋ? ಒಂದ್ಮಾತಂತು ನಿಜ. ಬರೆಯುವುದಕ್ಕೆ ಹೆಂಡ ಸ್ಫೂರ್ತಿಯಾಗಬೇಕಾದರೆ ಅಂತಹ ಸಾಹಿತ್ಯವನ್ನು ಓದಿ ಅರ್ಥಮಾಡಿಕೊಳ್ಳಲು ಹೆಂಡವೇ ಸ್ಫೂರ್ತಿಯಾಗಬೇಕು. ಇನ್ಮುಂದೆ ಸಾಹಿತ್ಯ ಸಮ್ಮೇಳನಕ್ಕೆ ಆರ್ಥಿಕ ಮುಗ್ಗಟ್ಟು ಇರೋದಿಲ್ಲ. ಮದ್ಯ ತಯಾರಿಕೆಯವರು ಪ್ರಾಯೋಜಿಸುತ್ತಾರೆ.

ಹಿಂದೆ ಶಾಯಿ (ಮಸಿ) ಕುಡಿಕೆಯಿಂದ ಲೇಖನಿಯ ಮೂಲಕ ಖಾಲಿ ಮಾಡುತ್ತಾ ಹಾಳೆಗಳನ್ನು ತುಂಬಿಸುತ್ತಿದ್ದರು. ಪಕ್ಕದಲ್ಲಿದ್ದ ಮದ್ಯದ ಬಾಟಲು ಕೂಡ ಖಾಲಿಯಾಗುತ್ತಿತ್ತು. ಹೆಂಡ ಲೇಖಕನ ಹೆಡ್ ಮೂಲಕ ಲೇಖನಿಗೆ ಇಂಕ್ ಜೊತೆ ಬೆರೆತು ಅದ್ಭುತ ಸಾಹಿತ್ಯ ಹೊರಬೀಳುತ್ತಿತ್ತು. ಡಾಟ್ ಪೆನ್ನು ಬಂತು ಈಗ ಡಾಟ್ ಕಾಮ್ ಬಂತು. ಮದ್ಯದ ಬಾಟಲ್ ಹಾಗೆ ಇದೆ. ಹಿಂದೆ ಕೆಲವು ಲೇಖಕರು ತಮ್ಮ ಮದ್ಯದ ಬಾಟಲು ಖಾಲಿಯಾದಾಗ ಕುಡಿದ ಅಮಲಿನಲ್ಲಿ ಪಕ್ಕದಲ್ಲಿದ್ದ ಶಾಯಿಯನ್ನು ಕುಡಿಕೆಯಿಂದ ಬಾಯಿಗೆ ಹಾಕಿಕೊಂಡು ವೈದ್ಯರ ಬಳಿ ಹೋದ ದೃಷ್ಟಾಂತ ಇದೆಯಂತೆ, ಸದ್ಯ ಈಗ ಆ ಅಪಾಯವಿಲ್ಲ.

★★★

ಹಾಲಿಪುಡ್ ಹೊಟ್ಟೆನೋವು

– ಬಿ.ಆರ್. ನಾಗೇಶ್

ಸಂಗೀತದಲ್ಲಿ ಮಾತ್ರವಲ್ಲ, ಹೊಟ್ಟೆ ನೋವಿನಲ್ಲಿಯೂ ಆರೋಹಣ ಅವರೋಹಣ ಇರುತ್ತದೆ. ಅಜ್ಜಿ ಹೊಟ್ಟೆನೋವು, ಯಂಬಿಬಿಯಸ್ ಹೊಟ್ಟೆನೋವು, ಯಂಡಿ ಹೊಟ್ಟೆನೋವು, ವೆಲ್ಲೂರು ಹೊಟ್ಟೆನೋವು, ಟಾಟಾ ಹೊಟ್ಟೆನೋವು ಮತ್ತು ಹಾಲಿವುಡ್ ಹೊಟ್ಟೆನೋವು - ಇದು ಆರೋಹಣ ಕ್ರಮದ್ದು; ಹಾಲಿವುಡ್ ಹೊಟ್ಟೆ ನೋವಿನಿಂದ ನೇರವಾಗಿ ಗರುಡ ಪುರಾಣ ಹೊಟ್ಟೆನೋವಿಗೆ ಇಳಿಯುವುದು ಅವರೋಹಣ ರೀತಿಯದು.

ಈ ಪ್ರಾಂತದ ಮಂತ್ರಿಗಳಿಗೆ (ಈಗ ಅವರು ಸಾಮಾನ್ಯ ಮಂತ್ರಿಗಳು; ಈಗಿನ ಮುಖ್ಯಮಂತ್ರಿಗಳು ಅಧಿಕಾರ ಕಳೆದುಕೊಂಡ ಬಳಿಕ ಇವರೇ ಮುಖ್ಯ ಮಂತ್ರಿಗಳಾಗುತ್ತಾರೆ) ಹೊಟ್ಟೆ ನೋವು ಕಾಣಿಸಿಕೊಂಡದ್ದು ವಿಶೇಷವೇನಲ್ಲ. ರಾಜಕಾರಣಿಗಳ ಹೊಟ್ಟೆನೋವಿಗೆ ಬೇರೆಯೇ ಅರ್ಥ ಇರುವುದಾದರೂ, ನೋವು ಕಾಣಿಸಿಕೊಳ್ಳುವುದು ಹೊಟ್ಟೆಯಲ್ಲಿಯೇ ಎಂಬುದರಿಂದ, ಆ ರೋಗ ಹೊಟ್ಟೆ ನೋವು ಬಳಗಕ್ಕೆ ಸೇರುತ್ತದೆ. ಈ ಮಂತ್ರಿ ದೇಶದ ರಾಜಕೀಯಕ್ಕೆ ಪ್ರವೇಶಿಸಿದ್ದು ಟೊಪ್ಪಿ ಮತ್ತು ದೊಣ್ಣೆ ಮೂಲಕ. ದೊಣ್ಣೆ ಕ್ರಮೇಣ ಕೋವಿಯಾಯಿತು - ಟೊಪ್ಪಿ ಹೋಯಿತು. ಇವರ ಶಕ್ತಿ ಕೋವಿಯಾದ ಬಳಿಕ ಇವರು ಮಂತ್ರಿ ಆದದ್ದು. ಮಂತ್ರಿಗಳಾದ ಮೇಲೆ ಹೊಟ್ಟೆನೋವು ಕಾಣಿಸಿಕೊಂಡದ್ದು. ಇವರು ಎಷ್ಟೆಷ್ಟೋ ಆಸ್ಪತ್ರೆಗಳಿಗೆ ಅಡಿಕಲ್ಲು ಹಾಕಿದ್ದಾರೆ, ಎಷ್ಟೆಷ್ಟೋ ಸ್ಮಶಾನಗಳನ್ನು ಉದ್ಘಾಟಿಸಿದ್ದಾರೆ. ಆದರೆ ಹೊಟ್ಟೆನೋವು ಒಂದನ್ನು ಬಿಟ್ಟರೆ, ಇವರಿಗೆ ಬೇರೆ ಯಾವ ರೋಗವೂ ಇದು ತನಕ ಬಂದದ್ದು ಎಂದಿರಲಿಲ್ಲ. ಹಾಗೆಂದು ಇವರಿಗೆ ದೊಡ್ಡ ಹೊಟ್ಟೆ ಏನೂ ಇರಲಿಲ್ಲ - ಎಂಭತ್ತಾರು - ನೂರಾಹತ್ತು - ತೊಂಭತ್ತಾರು ಸೈಜಿನದು.

ಮಂತ್ರಿಗಳಿಗೆ ಹೊಟ್ಟೆನೋವು ಬಂದೊಡನೆ ಇಡಿಯ ಇಲಾಖೆಯಲ್ಲಿ ಬೇರೆ ಬೇರೆ ನೋವುಗಳು ಪ್ರವೇಶಿಸುತ್ತವೆ. ಈ ಮಂತ್ರಿಗಳ ಹೊಟ್ಟೆನೋವಿನ ವಿಚಾರ ಅವರ ಇಲಾಖೆಯ ಕಾರ್ಯದರ್ಶಿಗಳಿಗೆ ತಿಳಿದೊಡನೆಯೆ ಅವರೇ ಓಡಿ ಓಡಿ ಮಂತ್ರಿಗಳ ಮನೆಗೆ ಬಂದರು. ಈ ಕಾರ್ಯದರ್ಶಿಯವರಿಗೆ ಇನ್ನು ಎರಡು ವರ್ಷ ಮಾತ್ರ ಅಧಿಕಾರದಲ್ಲಿ ಉಳಿಯುವ ಅವಕಾಶ ಇದ್ದುದರಿಂದ, ಈ ಎರಡು ವರ್ಷಗಳಲ್ಲಿ ತನ್ನನ್ನು ಎಲ್ಲಿಯಾದರೂ ಕೊಲೆಗಾರರು ಇರುವ ಜಾಗಕ್ಕೆ ವರ್ಗ ಮಾಡಿಯಾರು ಎಂಬ ಹೆದರಿಕೆಯಿಂದಲೇ, ಅವರು ಮಂತ್ರಿಗಳನ್ನು ನೋಡಲು ಬಂದದ್ದು.

ಮಂತ್ರಿಗಳ ಮಲಗುವ ಕೋಣೆಗೆ ಮೂರು ಬಾಗಿಲಗಳು - ವಾಸ್ತುವಿನ ಪ್ರಕಾರ ಇಲಾಖೆಯ ಅಧಿಕಾರಿಗಳು ಒಳಬರಲು ಒಂದು, ಧರ್ಮಪತ್ನಿ ಒಳಬರಲು ಇನ್ನೊಂದು ಮತ್ತು ಮೂರನೆಯದು ಕಪ್ಪ ಕಾಣಿಕೆ ಒಳ ಬರುವ ಬಾಗಿಲು. ಅಧಿಕಾರಿ ಒಂದನೆಯ ಬಾಗಿಲಿನಿಂದ ಒಳ ಪ್ರವೇಶಿಸಿದಾಗ, ಮಂತ್ರಿಗಳು ದೊಡ್ಡ ಮಂಚದ ಮೇಲೆ ಅಂಗಾತ ಬಿದ್ದಿದ್ದು, ಹೊಟ್ಟೆಯನ್ನು ನೀವಿಕೊಳ್ಳುತ್ತಾ ಇದ್ದರು. ಅವರ ಧರ್ಮಪತ್ನಿ ಅಲ್ಲಿರಲಿಲ್ಲ. ಅವರ ಆರೋಗ್ಯ ನೋಡಿಕೊಳ್ಳಲು ಇಪ್ಪತ್ತನಾಲ್ಕು ಗಂಟೆಯೂ ಸಿದ್ಧವಾಗಿದ್ದ ದಾದಿ ಅಲ್ಲಿದ್ದಳು. ಅಧಿಕಾರಿಗಳು ಒಳ ಬಂದೊಡನೆಯೆ ದಾದಿ ಎರಡನೆಯ ಬಾಗಿಲಿನ ಮೂಲಕ ಹೊರ ತೆರಳಿದಳು.

ಕಾರ್ಯದರ್ಶಿಗಳ ವಿಚಾರ ಪ್ರವಾಹ ಹೀಗೆ ಹರಿಯಿತು: ''ಸರ್, ಮಂತ್ರಿಗಳಿಗೆ ಹೊಟ್ಟೆನೋವು ಬರುವುದು ಸ್ವಾಭಾವಿಕ - ಮುಖ್ಯಮಂತ್ರಿಗಳಿಗೆ ಎದೆನೋವು ಹತ್ತಿಕೊಂಡ ಹಾಗೆ. ಯಾವನೊಬ್ಬ ಮಂತ್ರಿ, ಮುಖ್ಯಮಂತ್ರಿ ಆದೊಡನೆಯೆ, ಆತನ ಹೊಟ್ಟೆನೋವು ಎದೆ ನೋವಾಗಿ ಪರಿವರ್ತನೆ ಹೊಂದುತ್ತದೆ. ಇದಕ್ಕೆ ಕಾರಣ ಇದ್ದೇ ಇದೆ ಸಾರ್. ಹೊಟ್ಟೆನೋವನ್ನು ಈ ದೇಶದಲ್ಲಿಯೇ ಗುಣಪಡಿಸಬಹುದು - ಕಾರಣ ಈ ದೇಶದಲ್ಲಿ ಹೊಟ್ಟೆನೋವಿನ ರೋಗಿಗಳೇ ಹೆಚ್ಚು. ಆದರೆ ಎದೆ ನೋವು ಸ್ವಲ್ಪ ಗಂಭೀರವಾದದ್ದು. ಈ ದೇಶದಲ್ಲಿ ಯಾರಿಗಾದರೂ ಎದೆ ನೋವು ಬಂದರೆ, ಕೂಡಲೇ ಕಟ್ಟೆಗೆ ಒಟ್ಟು ಮಾಡಲು ತಿಳಿಸುತ್ತಾರೆ - ನೆಚ್ಚಿನವರು. ಅದಕ್ಕಾಗಿ ಎದೆ ನೋವು ಬಂದ ಕೂಡಲೇ ಅಮೇರಿಕಕ್ಕೆ ಹೋಗುವುದು. ಅಲ್ಲಿ ಕಟ್ಟೆಗೆಯ ಸಮಸ್ಯೆಯೇ ಇಲ್ಲ. ಇಲ್ಲಿಯ ಹೊಟ್ಟೆನೋವು ಭಾರತೀಯ ಜಾತಿಯದು; ಇಲ್ಲಿಯ ಎದೆನೋವು ಅಮೇರಿಕದ ಜಾತಿಯದು. ಹಾಗಾಗಿ ನೀವು ಹೊಟ್ಟೆನೋವನ್ನು ಎದೆನೋವು ಎಂದು ಬದಲಾಯಿಸಿಕೊಂಡರೆ, ನಿಯಮ ಪ್ರಕಾರ ಅಮೇರಿಕಕ್ಕೆ ಹೋಗಬಹುದು.''

ಕಾರ್ಯದರ್ಶಿಗಳ ಈ ಮಾತುಗಳನ್ನು ಕೇಳುತ್ತಿದ್ದಂತೆ, ಮಂತ್ರಿಯವರ ನೋವು ಹೊಟ್ಟೆಯಿಂದ ಎದೆಯ ಕಡೆಗೆ ಸ್ವಲ್ಪ ಸ್ವಲ್ಪವಾಗಿ ಮೇಲೇರಲು ತೊಡಗಿತು. ಆದರೆ ಹೃದಯವನ್ನು ಮುಟ್ಟಲಿಲ್ಲ. ಅಷ್ಟರಲ್ಲಿ ಕಾರ್ಯದರ್ಶಿ ಮುಂದುವರಿಸಿದರು: ''ಸರ್, ನಿನ್ನೆಯೆ ನಿಮ್ಮ ಹೊಟ್ಟೆನೋವಿನ ಕುರಿತು ನನಗೆ ತಿಳಿದು ಬಂತು. ಕೂಡಲೇ ವೀಸಾದ ಏರ್ಪಾಡು ಮಾಡಿದ್ದೇನೆ. ಪಾಸ್‌ಪೋರ್ಟ್ ಹೇಗೂ ಇದೆಯಲ್ಲಾ! ನೀವು ಹೊರಡುವುದೊಂದು ಬಾಕಿ. ಇಲ್ಲಿ ಬೇಕಾಗುವುದು ಸರಕಾರಿ ಆಸ್ಪತ್ರೆಯ ಡಾಕ್ಟರರ ಸರ್ಟಿಫಿಕೇಟು. ಅದನ್ನು ತಯಾರು ಮಾಡಿ ಇಟ್ಟಿರುತ್ತೇನೆ - ಸರ್ಟಿಫಿಕೇಟಿನಲ್ಲಿ ಎದೆ ನೋವು ಎಂದು ಬರೆಸಿರುತ್ತೇನೆ. ಇನ್ನೇನೂ ಯೋಚನೆ ಮಾಡಬೇಡಿ ಸರ್, ನಮ್ಮ ದೇಶದ ಡಾಕ್ಟರರೂ ಪ್ರಯೋಜನ ಇಲ್ಲದವರು. ಹೊಟ್ಟೆನೋವು ಎಂದರೆ ಎದೆನೋವಿಗೆ ಮದ್ದು ಕೊಡುತ್ತಾರೆ. ಎದೆ ನೋವು ಎಂದರೆ ಸೊಂಟನೋವಿಗೆ ಮುಲಾಮು ಕೊಡುತ್ತಾರೆ. ಇವರನ್ನು ಯಾರೂ ನಂಬುವ ಹಾಗಿಲ್ಲ. ನೀವು ತಯಾರಾಗಿ ಸರ್.

ಅಲ್ಲಿಗೆ ಹೋಗಿ ಬರುವ ಖರ್ಚು, ಅಲ್ಲಿಯ ಆಸ್ಪತ್ರೆಯ ಖರ್ಚು, ಎಲ್ಲವನ್ನೂ ಲೆಕ್ಕ ಹಾಕಿ, ಮುಂಗಡವನ್ನು ಟ್ರಜರಿಯಿಂದ ಪಡೆದೂ ಆಗಿದೆ. ನೀವಿನ್ನು ಹೊರಡುವುದು ಮಾತ್ರ ಬಾಕಿ.''

ಮಂತ್ರಿಗಳು ಎದ್ದು ಕುಳಿತರು.

''ನನ್ನೊಟ್ಟಿಗೆ ಬರುವವರು....''

''ನಿಮ್ಮ ಹೆಂಡತಿ ಮತ್ತು ನರ್ಸ್ ಮತ್ತು ಇಬ್ಬರು ಐ.ಪಿ.ಯಸ್. ಅಧಿಕಾರಿಗಳು. ನೀವು ಇಲ್ಲಿಂದ ಕಣ್ಣು ಮುಚ್ಚಿ ಹೊರಡಬಹುದು - ಅಮೇರಿಕಾ ಮುಟ್ಟಿದ ಮೇಲೆಯೇ ಕಣ್ಣು ತೆರೆಯಬಹುದು. ಅಷ್ಟು ಸುಲಭವಾಗಿದೆ ಎಲ್ಲಾ ಕೆಲಸ....''

ಮಂತ್ರಿಗಳು ಹೆಂಡತಿ, ದಾದಿಯರನ್ನು ಬರಹೇಳಿದರು. ಅಮೇರಿಕಕ್ಕೆ ಹೋಗಲು ಅವರಿಬ್ಬರು ಎಂದಿನಿಂದಲೋ ತಯಾರಿ ನಡೆಸಿದ್ದರು. ಅವರಿಗೂ ಗೊತ್ತಿತ್ತು, ಮಂತ್ರಿಗಳ ಹೊಟ್ಟೆನೋವಿಗೆ ಔಷಧಿ ಅಮೇರಿಕದಲ್ಲಿ ಮಾತ್ರ ಸಿಗುತ್ತದೆ ಎಂದು. ಹಾಗಾಗಿ ಎಲ್ಲಾ ತಯಾರಿಯಾಗಿತ್ತು.

''ಅಮೇರಿಕದ ನ್ಯೂಯಾರ್ಕ್, ವಾಷಿಂಗ್‌ಟನ್ ಮುಂತಾದ ಆಸ್ಪತ್ರೆ ಬೇಡಾ.....'' ಮಂತ್ರಿಗಳ ಉದ್ಗಾರ.

''ನನಗದು ಗೊತ್ತು ಸರ್. ಅದಕ್ಕಾಗಿಯೆ ಹಾಲಿವುಡ್‌ನ ಆಸ್ಪತ್ರೆಯನ್ನು ಗೊತ್ತು ಮಾಡಿದ್ದೇನೆ.''

ಮಂತ್ರಿಗಳು ಮಂಚದಿಂದ ಕೆಳಗಿಳಿದರು. ಅವರ ಹೆಂಡತಿ ಮತ್ತು ದಾದಿಯರ ಮುಖ ಅರಳಿತು. ಮಂತ್ರಿಯವರಿಗೆ ಪ್ರತಿ ಮೂರು ವರ್ಷಕ್ಕೊಮ್ಮೆ ಹೊಟ್ಟೆನೋವು ಅಥವಾ ಎದೆನೋವು ಬರುವಂತಾಗಲಿ ಎಂದು ದೇವರೊಡನೆ ಪ್ರಾರ್ಥಿಸಿ, ಅದಾಗಲೇ ತುಂಬಿಸಿಟ್ಟ ಸೂಟ್‌ಕೇಸ್‌ಗಳನ್ನು ಆಳುಗಳ ಮೂಲಕ ಹೊರಿಸಿ, ಹೊರಗೆ ನಿಂತಿದ್ದ ಉದ್ದನೆಯ ಥಂಡಿ ಕಾರಿನಲ್ಲಿ ತುಂಬಿಸಿ, ವಿಮಾನ ನಿಲ್ದಾಣಕ್ಕೆ ತಾವೇ ಮೊದಲಾಗಿ ಮುಟ್ಟಬೇಕು ಎಂಬ ಉತ್ಸಾಹದಿಂದ ಅರಮನೆಯ ಮೆಟ್ಟಲ ಮೇಲೆ ನಿಂತಿದ್ದ ಮಂತ್ರಿಗಳಿಗೆ ಕಾಯುತ್ತಿದ್ದರು.

ಮಂತ್ರಿಗಳು ಹೊರಬಂದರು. ಥಂಡಿ ಕಾರಿನಲ್ಲಿ ಕುಳಿತರು - ಅವರ ಆರೋಗ್ಯ ಖಾತೆಯೂ ಕುಳಿತಿತು. ಕಾರು ವಿಮಾನ ನಿಲ್ದಾಣಕ್ಕೆ ತಲುಪಿದಾಗ ಇಬ್ಬರು ಐ.ಪಿ.ಯಸ್. ಅಧಿಕಾರಿಗಳು ಅಲ್ಲಿ ತಯಾರು. ವಿಮಾನ ಬಂತು. ಮಂತ್ರಿಗಳು ವಿಮಾನ ಏರುತ್ತಿದ್ದಂತೆ ಕಾರ್ಯದರ್ಶಿಗಳು ''ನೆನಪಿರಲಿ ಸರ್, ಇನ್ನು ನನಗೆ ಸರ್ವಿಸ್ ಇರುವುದು ಎರಡೇ ವರ್ಷ. ಅದರ ಮೊದಲು ಬೇರೆ ಎಲ್ಲಿಗಾದರೂ ವರ್ಗ ಮಾಡಬೇಡಿ ಸರ್, ಪ್ಲೀಸ್. ನನ್ನ ಮೇಲೆ ಆಪಾದನೆಗಳು ಇವೆ ಸರ್. ಅವುಗಳೆಲ್ಲ ಸುಳ್ಳು ಸರ್'' ಎಂದು ನುಡಿದು, ಮಂತ್ರಿಗಳ ಕಾಲು ಹಿಡಿಯಲು ಬಗ್ಗಿದರು.

ಹಾಲಿವುಡ್ ತಲುಪಿ, ಆಸ್ಪತ್ರೆಯ ಕೋಣೆ ಸೇರಿದೊಡನೆಯ ಮಂತ್ರಿಗಳ ಮಡದಿ ಮತ್ತು ದಾದಿ ಕಾಣೆ. ಎಷ್ಟೆಂದರೂ ಹಾಲಿವುಡ್ ತಾನೇ? ಎಷ್ಟೆಷ್ಟೋ

ಸಿನಿಮಾ ನಟನಟಿಯರು ಮಾರ್ಗದಲ್ಲಿ ನೋಡಲು ಸಿಗಬಹುದು. ಹಾಗೆ ಅವರನ್ನು ಜೀವಂತ ಕಾಣಲು ಅವರಿಬ್ಬರು ಹೊರ ಹೊರಟಿದ್ದು, ಪಾಪ! ಐ.ಪಿ.ಯಸ್. ಅಧಿಕಾರಿಗಳಿಗೆ ಇಂಗ್ಲಿಷ್ ಸಿನೇಮಾ ಅರ್ಥವಾಗುತ್ತಿರಲಿಲ್ಲ ಅವರು ನೋಡುತ್ತಿದ್ದುದು ಹಿಂದಿ ಸಿನೇಮಾ ಮಾತ್ರ.

ಹೊಟ್ಟೆನೋವು ತೀವ್ರವಾಯಿತು. ತೀವ್ರತಮ ಪರೀಕ್ಷೆಗಳಾದವು. ದೇಹದ ಎಲ್ಲಾ ಭಾಗಗಳ ಎಕ್ಸ್‌ರೇ ಆಯಿತು - ದೇಹದಲ್ಲಿಯ ಎಲ್ಲಾ ದ್ರವಗಳ ಪರೀಕ್ಷೆ ಆಯಿತು. ಡಾಕ್ಟರಿಗೆ ಅವರು ಸಮಸ್ಯಾತ್ಮಕ ಮಂತ್ರಿ ಆದರು.

ಶಸ್ತ್ರ ಚಿಕಿತ್ಸೆಗೆ ಮಂತ್ರಿಗಳು ಹಿಂದೆ. ಒಮ್ಮೆ ಆ ಬಡ ದೇಹಕ್ಕೆ ಶಸ್ತ್ರ ಪ್ರವೇಶ ಆದರೆ ಮತ್ತೂ ಅದರಿಂದ ಮುಕ್ತಿ ಇಲ್ಲ ಎಂದು ಯಾರೋ ಜ್ಯೋತಿಷಿಗಳು ಹೇಳಿದ್ದೂ ಮಂತ್ರಿಗಳಿಗೆ ಆಗಾಗ ನೆನಪಿಗೆ ಬರತೊಡಗಿದ ಕ್ಷಣಗಳವು.

ಇವರ ಮೇಲ್ವಿಚಾರಣಾ ಡಾಕ್ಟರರು, ಏಳು ವರ್ಷಗಳ ಹಿಂದೆ ''ಭಾರತದ ನಾಟಿ ಔಷಧಗಳು'' ಎಂಬ ಪುಸ್ತಕ ಬರೆಯಲು ಭಾರತಕ್ಕೆ ಬಂದಿದ್ದು, ಬಿಹಾರದ ಮಧುಬನಿಯಿಂದ ಮೂವತ್ತು ಕಿಲೋಮೀಟರ್ ಒಳಗಿರುವ ಹಳ್ಳಿಯ ಮೂಲೆಯೊಂದರಲ್ಲಿ, ಹರಕು ಸೀರೆ ಕೊಳಕು ರವಿಗೆ ತೊಟ್ಟಿದ್ದ ಮುದುಕಿಯೊಬ್ಬಳಿಂದ ಹೊಟ್ಟೆನೋವಿಗಾಗುವ ನಾಟಿ ಔಷಧಿಯನ್ನು ಪಡೆದು, ಅದನ್ನು ಅಮೇರಿಕಕ್ಕೆ ತಂದು, ಮಂತ್ರಿ ರೀತಿಯ ಹೊಟ್ಟೆನೋವು ಬರುವ ಹಲವಾರು ಚಿನ್ನ ಚಮಚ ರೋಗಿಗಳಿಗೆ ಆ ಕಷಾಯ ಕೊಟ್ಟು ಗುಣಪಡಿಸಿದ್ದರು. ಆ ಡಾಕ್ಟರರೇ ಆ ಮುದುಕಿಯ ವಿಳಾಸ ಕೊಟ್ಟು, ಅವಳನ್ನು ಕಷಾಯ ಸಹಿತ ಹಾಲಿವುಡ್‌ಗೆ ಕರೆಯಿಸಬೇಕೆಂದು ಸೂಚಿಸಿದರು. ಭಾರತದ ಎಲ್ಲಾ ಪ್ರಜೆಗಳೂ ಈ ಸುದ್ದಿ ಕೇಳಿ ಸಂಭ್ರಮದಿಂದ ಕುಣಿದಾಡಿದರು. ತಾವು ಸರಕಾರಕ್ಕೆ ಕೊಟ್ಟ ತೆರಿಗೆಯಿಂದ ಮಂತ್ರಿ, ಮಂತ್ರಿ ಪರಿವಾರ, ನಾಟಿ ಮುದುಕಿ - ಎಲ್ಲರೂ ಹಾಲಿವುಡ್ ನೋಡುವಂತಾಯಿತಲ್ಲಾ - ಎಂಬ ಅತಿರೇಕ ಸಂತೋಷದಿಂದ, ಊರಲ್ಲಿರುವ ನೂರಾರು ದೇವಸ್ಥಾನಗಳಲ್ಲಿ ಮಂತ್ರಿಗಳ ಹೊಟ್ಟೆನೋವು ಗುಣವಾಗಲಿ ಎಂದು ಪ್ರಾರ್ಥಿಸಿದರು. ಅವರ ಪ್ರಾರ್ಥನೆ ಕೇಳಿ ಮಳೆ ಬಂತು.

ಮುದಕಮ್ಮ ಹಾಲಿವುಡ್ ತಲುಪಿತು. ಮಂತ್ರಿಯವರನ್ನು ನೋಡಿತು. ಎರಡು ಪ್ರಶ್ನೆ ಕೇಳಿತು. ತಾನು ಊರಿನಿಂದ ತಂದಿದ್ದ ಕಷಾಯವನ್ನು ತಾನೇ ಮಂತ್ರಿಗಳಿಗೆ ಕುಡಿಸಿತು. ಮೂರು ದಿನದಲ್ಲಿ ಮಂತ್ರಿ ಹೊಟ್ಟೆನೋವು ಗುಣವಾಯಿತು. ರೋಗ ಗುಣವಾದೊಡನೆ ಹಾಲಿವುಡ್ ಬಿಡಬಾರದು ಎಂಬ ಸಾಮಾನ್ಯ ಜ್ಞಾನಕ್ಕೆ ಬೆಲೆ ಕೊಟ್ಟು, ಮಂತ್ರಿ ಮತ್ತವರ ಪರಿವಾರ ಒಂದು ತಿಂಗಳು ಕಾಲ ಹಾಲಿವುಡ್‌ನಲ್ಲಿದ್ದು, ಬಳಿಕ ದೇಶಕ್ಕೆ ಹಿಂದಿರುಗಿತು. ಹಾಗೆ ಹಿಂತಿರುಗಲು ಕಾರಣ ಮಂತ್ರಿಗಳಿಗೆ ಕಿಂಚಿತ್ತು ಎದೆನೋವು ಪ್ರಾರಂಭವಾದದ್ದು - ಆ ನೋವು ಮುಖ್ಯ ಮಂತ್ರಿಯಾಗಲು ಪೂರ್ವ ಸೂಚನೆ ಎಂದು ಅವರು ತಿಳಿದದ್ದು. ಈ ಇಡಿಯ ಹೊಟ್ಟೆನೋವಿನ ಯಾತ್ರೆ ತೆರಿಗೆದಾರರ ವಿಜಯವಲ್ಲವೇ?

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003.
PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010
Editor : M. SHIVAKUMAR